MAA ಫ್ರೆಂಡ್ಸ್ ಸಾರಥ್ಯದಲ್ಲಿ...

# ಯುವ ಮಾರ್ಗ

YUVA MARGA NEWS PAPER
VOICE OF THE NATION

ಕನ್ನಡ ದಿನಪತ್ರಿಕೆ "ಇದು ರಾಷ್ಟ್ರದ ಧ್ವನಿ"

ಸಂಪಾದಕರು : ಅನಿಲ ಕುಮಾರ್ ಹೆಚ್
Cell : 9743497111

ಪ್ರಧಾನ ಸಂಪಾದಕರು : ಮನೋಜ ಮಿಶ್ರಾ
Cell : 9743496111

YUVA MARGA KANNADA DAILY NEWS PAPER

ಸಂಪುಟ: 04 | ಸಂಚಿಕೆ: 319 | ಗುರುವಾರ : 09-10-2025 | ರಾಯಚೂರು | RNI NO: KARKAN/2022/90446 | ಪುಟ: 4 | ಬೆಲೆ: ರೂ: 2-00

VOLUME: 04 | ISSUE: 319 | THURSDAY : 09-10-2025 | RAICHUR | EMAIL: YUVAMARGA@GMAIL.COM | PAGE: 4 | PRICE: Rs: 2-00

## ಜಾತಿ ಸಮೀಕ್ಷೆಗೆ 650 ಕೋಟಿ ವೆಚ್ಚ : ಅಶೋಕ್ ಆಕ್ರೋಶ

**ಬೆಂಗಳೂರು,ಅ.8**–ಜಾತಿಗಣತಿ ಹೆಸರಿನಲ್ಲಿ ಹತ್ತು ವರ್ಷಗಳ ಹಿಂದೆಯೇ 150 ಕೋಟಿ ರೂಪಾಯಿ ಹಣವನ್ನು ಪೋಲು ಮಾಡಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮತ್ತೆ ಅದಕ್ಕಿಂತಲೂ ಹೆಚ್ಚಿನ ಸಾರ್ವಜನಿಕ ಹಣವನ್ನು ಅಪವ್ಯಯ ಮಾಡಲು ಹೊರಟಿದ್ದಾರೆ ಎಂದು ವಿಧಾನಸಭೆಯ ಪ್ರತಿಪಕ್ಷ ನಾಯಕ ಆರ್.ಅಶೋಕ್ ಕಿಡಿಕಾರಿದ್ದಾರೆ.



ಈ ಕುರಿತು ಸಾಮಾಜಿಕ ಜಾಲ ತಾಣ ಎಕ್ಸ್‌ನಲ್ಲಿ ಪೋಸ್ಟ್ ಮಾಡಿರುವ ಅವರು, ಜಾತಿಗಣತಿ ನಡೆಸಲು ಎಷ್ಟು ಸಮಯ ಬೇಕು ಎನ್ನುವ ಬಗ್ಗೆ ಪೂರ್ವಯೋಜನೆ ಇಲ್ಲ? ಜಾತಿಗಣತಿಯಲ್ಲಿ ಯಾವ ಪ್ರಶ್ನೆ ಕೇಳಬೇಕು ಎನ್ನುವ ಬಗ್ಗೆ ಸ್ಪಷ್ಟತೆ ಇಲ್ಲ. ಜಾತಿಗಣತಿಗೆ ಶಿಕ್ಷಕರನ್ನು ನಿಯೋಜನೆ ಮಾಡಿದರೆ ಸರ್ಕಾರಿ ಶಾಲೆಗಳಲ್ಲಿ ಯಾರು? ಪಾಠ ಮಾಡುತ್ತಾರೆ ಎನ್ನುವ ಬಗ್ಗೆ ಯೋಚನೆ ಮಾಡಲಿಲ್ಲ ಎಂದು ಆರೋಪಿಸಿದ್ದಾರೆ.

ಯಾವುದೇ ಪೂರ್ವಸಿದ್ಧತೆ, ರೂಪುರೇಷೆ, ಗೊತ್ತು-ಗುರಿ ಇಲ್ಲದೆ, ಕೇವಲ ರಾಜಕೀಯ ತೆವಲಿಗೆ ಮಾಡುತ್ತಿರುವ ಈ(2ನೇಪುಟಕ್ಕೆ)

## ಗರ್ಭಿಣಿಯರು ಮತ್ತು ಬಾಣಂತಿಯರು ಪೌಷ್ಟಿಕ ಆಹಾರ ಸೇವಿಸಿ : ಬಸವರಾಜ ಝುಳಕಿಮಠ

**ಯುವ ಮಾರ್ಗ ಸುದ್ದಿ**

**ಲಿಂಗಸುಗೂರು,ಅ.8**–ಸದೃಢ ಮತ್ತು ಆರೋಗ್ಯವಂತ ಸಮಾಜ ಕಟ್ಟಬೇಕಾದರೆ ಗರ್ಭಿಣಿಯರು, ಬಾಣಂತಿಯರು ಮತ್ತು ಚಿಕ್ಕ ಮಕ್ಕಳು ಪೌಷ್ಟಿಕ ಆಹಾರ ಸೇವಿಸುವ ಮೂಲಕ ತಮ್ಮ ಮತ್ತು ಮಕ್ಕಳ ಆರೋಗ್ಯ ಕಾಪಾಡಿಕೊಳ್ಳಬೇಕು ಎಂದು ಗ್ರೇಡ 2 ತಹಸೀಲ್ದಾರ್ ಬಸವರಾಜ ಝುಳಕಿಮಠ ಹೇಳಿದರು.

ಪಟ್ಟಣದಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ತಾಲೂಕ ಆಡಳಿತ ತಾಲೂಕು ಪಂಚಾಯತ ತಾಲೂಕು ಕಾನೂನು ಸೇವಾ ಸಮಿತಿ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು ಇವರ ಸಂಯುಕ್ತಾಶ್ರಯದಲ್ಲಿ ನಡೆದ ರಾಷ್ಟ್ರೀಯ ಪೋಷಣಾ ಅಭಿಯಾನ ಮಾಶಾಚರಣೆ ಕಾರ್ಯಕ್ರಮವನ್ನು ಉದ್ಘಾಟನೆ ಮಾಡಿ ಮಾತನಾಡಿದ ಅವರು,ಹದಿಹರೆಯದ ಹುಡುಗಿಯರು, ಗರ್ಭಿಣಿಯರು, ಹಾಲುಣಿಸುವ ತಾಯಂದಿರು ಮತ್ತು ಮಕ್ಕಳ ಪೌಷ್ಟಿಕಾಂಶದ ಫಲಿತಾಂಶಗಳನ್ನು ಸುಧಾರಿಸಲು ಇದು ಭಾರತ ಸರ್ಕಾರದ ಪ್ರಮುಖ ಯೋಜನೆಯಾಗಿದೆ.



2018ರಲ್ಲಿ ಪ್ರಧಾನ ಮಂತ್ರಿಯವರು ಪ್ರಾರಂಭಿಸಿದ ಈ ಅಭಿಯಾನವು ಕಡಿಮೆ ಪೋಷಣೆ,ಬೆಳವಣಿಗೆ ಕುಂಠಿತ, ರಕ್ತಹೀನತೆ ಮತ್ತು ಕಡಿಮೆ ಜನನ ತೂಕದ ಪ್ರಮಾಣವನ್ನು ಕಡಿಮೆ ಮಾಡುವ ಗುರಿಯನ್ನು ಇದು ಹೊಂದಿದೆ. ಅದರಿಂದ ಗರ್ಭಿಣಿಯರು ಮತ್ತು ಬಾಣಂತಿಯರು ಉತ್ತಮ ಪೌಷ್ಟಿಕ ಆಹಾರ ಸೇವಿಸಿ ಸದೃಢ ಭಾರತ ಕಟ್ಟಿ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶಿಶು ಅಭಿವೃದ್ಧಿ ಯೋಜನಾಧಿಕಾರಿ ನಾಗರತ್ನ ವಹಿಸಿ ಮಾತನಾಡಿದರು. ಪ್ರಾಸ್ತಾವಿಕವಾಗಿ ಗುರುಬಸಮ್ಮ ಮಾತನಾಡಿದರು.

ಈ ಸಂದರ್ಭದಲ್ಲಿ ಅನೀಲ ಪಾಟೀಲ ವಕೀಲರು, ಶರಣಮ್ಮ ಹೂನೂರ, ಬಸವರಾಜ, ಹನುಮಂತರಾಯ, ಬಸವರಾಜ ಗುಡಿಹಾಳ, ಕಲ್ಲೇಶ, ಅಶೋಕ, ಮೇಲ್ವಿಚಾರಕಿಗಳಾದ ಶ್ರೀದೇವಿ ಕಲ್ಲಯ್ಯಮಠ, ಶಾಂತಾ ರೊಳ್ಳಿ ಸಂಕಮ್ಮ ಲಕ್ಷ್ಮಿ ಜಯಶ್ರೀ ಪಾಟೀಲ ಶಿವಲೀಲಾ ಹಿರೇಮಠ, ಬಸಮ್ಮ, ಈರಮ್ಮ ಲಚಮಮ್ಮ, ನಜ್ಮಾ, ಅನುಸೂಯ, ಹೇಮಾ, ಚಂದ್ರಶೇಖರ, ನಾಗರಾಜಇದ್ದರು

## ಪ್ರತಿ ಎಕರೆಗೆ 25 ಸಾವಿರ ಪರಿಹಾರ ನೀಡಲು ರೈತ ಸಂಘ ಆಗ್ರಹ



**ಯುವ ಮಾರ್ಗ ಸುದ್ದಿ**

**ಮಾನ್ವಿ,ಅ.8**– ಮಾನ್ವಿ ಮತ್ತು ಸಿರವಾರ ತಾಲೂಕಿನಾದ್ಯಾಂತ ಭಾರಿ ಮಳೆಯಿಂದ ಹಾನಿಗೊಳಗಾದ ರೈತರ ಬೆಳೆಗೆ ಪ್ರತಿ ಎಕರೆಗೆ 25 ಸಾವಿರ ಪರಿಹಾರ ನೀಡುವುದು ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಕರ್ನಾಟಕ ರಾಜ್ಯ ರೈ ಸಂಘ ಹಾಗೂ ಹಸಿರು ಸೇನೆ ಪಟ್ಟಣದ ವಾಲ್ಮೀಕಿ ವೃತ್ತದಿಂದ ತಾಲೂಕ ಪಂಚಾಯತಿ ಆವರಣದವರೆಗೆ ಪ್ರತಿಭಟನೆ ಮೆರವಣಿಗೆ ನಡೆಸಿ ಧರಣಿ ಸತ್ಯಾಗ್ರಹ ನಡೆಸಿದರು.

ಮಾನ್ವಿ ಎಪಿಎಂಸಿ ಯಲ್ಲಿ ಭಾರಿ ಭ್ರಷ್ಟಚಾರವಾಗಿದ್ದು, ತನಿಖೆಗೆ ಒಳಪಡಿಸಿ ತಪ್ಪಿತಸ್ಥ ಅಧಿಕಾರಿಗಳ ವಿರುದ್ಧ ಸೂಕ್ತ ಕಾನೂನು ಕ್ರಮ ಜರುಗಿಸಬೇಕು. ತಾಲೂಕಿನ ಸಮಾಜ ಕಲ್ಯಾಣ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ನಟರಾಜ ಇವರನ್ನು ಸೇವೆಯಿಂದ ವಜಾಗೊಳಿಸಬೇಕು ಹಾಗೂ ಅವರ ಅವಧಿಯಲ್ಲಿ ಆಗಿರುವ ಎಲ್ಲಾ ಟೆಂಡರ್ ಸಾಮಾಗ್ರಿಗಗಳನ್ನು ತನಿಖೆಗೆ ಒಳಪಡಿಸಬೇಕು. ಪರಿಶಿಷ್ಟ ಪಂಗಡದ ಇಲಾಖೆಯಲ್ಲಿ ಹಣವನ್ನು ಲೂಟಿ ಮಾಡಿರುವ ಮಹಾಲಿಂಗಪ್ಪ ಇಂಗಳದಾಳ್ ಅವರನ್ನು ಸೇವೆಯಿಂದ ವಜಾಗೊಳಿಸಬೇಕು. ತಾಲೂಕಿನಲ್ಲಿ ಅಕ್ರಮವಾಗಿ ನಡೆಸುತ್ತಿರುವ ಆರ್‌ಎಂಪಿ ನಕಲಿ ಡಾಕ್ಟರ್‌ಗಳ ನಡೆಸುತ್ರಿರುವ ಔಷಧಿ ಅಂಗಡಿಗಳ ಮಾಲಿಕರ ವಿರುದ್ಧ ಕ್ರಮ ಕೈಗೊಳ್ಳಬೇಕು ಹಾಗೂ ತಾಲೂಕಾಧಿಕಾರಿ ವಿರುದ್ಧ ಕ್ರಮ ಕೈಗೊಳ್ಳಬೇಕು ಮತ್ತು ಸಂಗಾಪೂರ ಗ್ರಾಮದ ಸರ್ವೇ ನಂಬರ್ 162 ರಲ್ಲಿ ಅಕ್ರಮವಾಗಿ ಉಳುಮೆ ಮಾಡುತ್ತಿರುವ ಬಲಾಡ್ಯ ವ್ಯಕ್ತಿಗಳನ್ನು ತನಿಖೆ ಮಾಡಿ ವಾಸುದಾರರಿಗೆ ಭೂಮಿಯನ್ನು ನೀಡಬೇಕು ಎಂದು ವಿವಿಧ ಬೇಡಿಕೆಗಳ ಈಡೇರಿಕಗೆ ಆಗ್ರಹಿಸಿದರು.

ಈ ಸಂದರ್ಭದಲ್ಲಿ ಜಿಲ್ಲಾಧ್ಯಕ್ಷ ಕೆ.ವೈ.ಬಸವರಾಜ ನಾಯಕ, ಜಿಲ್ಲಾ ಗೌರವಾಧ್ಯಕ್ಷ ವೀರೇಶ ನಾಯಕ ಕೊಟ್ನೆಕಲ್, ತಾಲೂಕ ಅಧ್ಯಕ್ಷ ಹೊಳೆಪ್ಪ ಉಟಕನೂರು, ರವಿಕುಮಾರ ಸುಂಕನೂರು, ಚಂದ್ರು ಜಗ್ಗಿ ಸಂಗಾಪೂರ, ಶ್ರೀಧರ ಕೊಟ್ನೆಕಲ್, ಶಿವಪ್ಪ ಹರಿಜನ, ಬಸವಲಿಂಗಪ್ಪ, ರವಿಕುಮಾರ, ಹನುಮಂತರಾಯ, ನಾಗರಾಜ, ಸುರೇಶ ದಲಿತ ಸೇನೆಯ ತಾಲೂಕ ಅಧ್ಯಕ್ಷ ರಮೇಶ ಕರೆಗುಡ್ಡ, ಸಂಘಟನಾ ಕಾರ್ಯದರ್ಶಿ ರಮೇಶ ಹೊಸುರು, ಪ್ರಧಾನ ಕಾರ್ಯದರ್ಶಿ ನಾಗರಾಜ ಕರೆಗುಡ್ಡ, ಶಿವಾನಂದ ದೊಡ್ಡಮನಿ ಸೇರಿದಂತೆ ಆನೇಕರು ಇದ್ದರು.

## ಭಾರತದ ಮೊದಲ ಹೆವಿ-ಡ್ಯೂಟಿ ಬ್ಯಾಟರಿ ವಿನಿಮಯ ಕೇಂದ್ರಕ್ಕೆ ಚಾಲನೆ

**ಸೋನಿಪತ್ (ಹರಿಯಾಣ), ಅ.8**– ಭಾರತದ ಸ್ವಚ್ಛ ಚಲನಶೀಲತೆಯ ಪರಿವರ್ತನೆಗೆ ಒಂದು ಮೈಲಿಗಲ್ಲಾಗಿ, ಕೇಂದ್ರದ ಬೃಹತ್ ಕೈಗಾರಿಕೆ ಮತ್ತು ಉಕ್ಕು ಖಾತೆ ಸಚಿವರಾದ ಹೆಚ್.ಡಿ. ಕುಮಾರಸ್ವಾಮಿ ಅವರು ಕೇಂದ್ರದ ಹೆದ್ದಾರಿ ಸಚಿವ ನಿತಿನ್ ಗಡ್ಕರಿ ಅವರೊಂದಿಗೆ ಶನಿವಾರದಂದು ಹರಿಯಾಣದ ಸೋನಿಪತ್‌ನಲ್ಲಿರುವ ಅಂತಾರಾಷ್ಟ್ರೀಯ ಸರಕು ಟರ್ಮಿನಲ್ (ಡಿಐಸಿಟಿ) ನಲ್ಲಿ ದೇಶದ ಮೊದಲ ಸರಕು ಸಾಗಣೆ ವಾಹನಗಳ ಹೆವಿ-ಡ್ಯೂಟಿ ಬ್ಯಾಟರಿ ವಿನಿಮಯ ಕೇಂದ್ರವನ್ನು ಲೋಕಾರ್ಪಣೆ ಮಾಡಿದರು.

ಇದು ವಿನಿಮಯ ಮಾಡಬಹುದಾದ ಬ್ಯಾಟರಿ ವಿದ್ಯುತ್ ಹೆವಿ-ಡ್ಯೂಟಿ ಟ್ರಾಕ್ಟರ್-ಟ್ರೇಲರ್‌ಗಳು ಮತ್ತು ವಾಣಿಜ್ಯ ವಾಹನಗಳಿಗಾಗಿ ಬಹುಕ್ರಿಯಾತ್ಮಕ ಸ್ವಾಪ್-ಕಮ್-ಚಾರ್ಜಿಂಗ್ ಸ್ಟೇಷನ್ ಆಗಿದ್ದು, ಇಬ್ಬರೂ ಹಿರಿಯ ಸಚಿವರು ಚಾಲನೆ ನೀಡಿದರು.



ಎನರ್ಜಿ ಇನ್ ಮೋಷನ್ ಪ್ರೈವೇಟ್ ಲಿಮಿಟೆಡ್‌ನಿಂದ ಸ್ಥಾಪಿಸಲ್ಪಟ್ಟಿರುವ ಈ ಸೌಲಭ್ಯವು, ಎರಡು ಗಂಟೆಗಳಿಗಿಂತ ಹೆಚ್ಚಿನ ಸಾಂಪ್ರದಾಯಿಕ ಚಾರ್ಜಿಂಗ್ ಸಮಯಕ್ಕೆ ಹೋಲಿಸಿದರೆ ಏಳು ನಿಮಿಷಗಳಿಗಿಂತ ಕಡಿಮೆ ಅವಧಿಯಲ್ಲಿ ಭಾರೀ ಟ್ರಕ್ ಬ್ಯಾಟರಿಗಳನ್ನು ವಿನಿಮಯ ಮಾಡಿಕೊಳ್ಳಲು ಅವಕಾಶ ಒದಗಿಸುತ್ತದೆ ಮತ್ತು ಭಾರತದ ಅಅಖ-2 ಮಾನದಂಡಕ್ಕೆ ಹೊಂದಿಕೆಯಾಗುವ ಹೆವಿ-ಡ್ಯೂಟಿ ಆಅ ಚಾರ್ಜರ್‌ಗಳನ್ನು ಸಹ ಹೊಂದಿದೆ.(2ನೇಪುಟಕ್ಕೆ)

## ಹಿಂದೂಗಳಲ್ಲಿ ಭಯದ ವಾತಾವರಣ ನಿರ್ಮಾಣ ಮಾಡುತ್ತಿರುವವರ ಮೇಲೆ ಕ್ರಮ ಕೈಗೊಳ್ಳಲು ಮನವಿ

**ಯುವ ಮಾರ್ಗ ಸುದ್ದಿ**

**ಮಾನ್ವಿ,ಅ.8**–ಪಟ್ಟಣದ ತಹಸೀಲ್ದಾರ್ ಕಚೇರಿಯಲ್ಲಿ ಹಿಂದೂ ಜನಜಾಗೃತಿ ಸಮಿತಿ ತಾಲೂಕು ಘಟಕದಿಂದ ಮುಖ್ಯಮಂತ್ರಿಗಳಿಗೆ ಉಪತಹಸೀಲ್ದಾರ ವಿರುಪಣ್ಣರವರ ಮೂಲಕ ಹಿಂದೂ ಜನಜಾಗೃತಿ ತಾ. ಸಮಿತಿಯ ದುರ್ಗಪ್ಪ ಮನವಿ ಸಲ್ಲಿಸಿ ಮಾತನಾಡಿ, ದೇಶದ ಹಲವು ರಾಜ್ಯಗಳಲ್ಲಿ ಐ ಲವ್ ಮೊಹಮ್ಮದ್ ಅಭಿಯಾನ ಅಂಗವಾಗಿ ಕೇಲವು ಮುಸ್ಲಿಂ ಯುವಕರು ಹಿಂದೂ ಧರ್ಮದವರನ್ನು ಗುರಿಯಾಗಿಸಿಕೊಂಡು ಹಲ್ಲೆ ನಡೆಸುವ ಮೂಲಕ ಹಿಂದೂಗಳಲ್ಲಿ ಭಯದ ವಾತಾವರಣ ನಿರ್ಮಾಣ ಮಾಡಿದ್ದಾರೆ ಅದ್ದರಿಂದ ಸಮಾಜದಲ್ಲಿ ಅಶಾಂತಿಯನ್ನು ಉಂಟು ಮಾಡುತ್ತಿರುವ ಯುವಕರನ್ನು ಪ್ರಚೋದಿಸುತ್ತಿರುವವರನ್ನು ಪೊಲೀಸ್ ಇಲಾಖೆ ಪತ್ತೆ ಹಚ್ಚಿ ಬಂದಿಸಬೇಕು ಹಾಗೂ ರಾಷ್ಟ್ರೀಯ ಭದ್ರತಾ ಕಾಯಿದೆ ಮತ್ತು ಕಾನೂನುಬಾಹಿರ ಚಟುವಟಿಕೆಗಳ ತಡೆಗಟ್ಟುವಿಕೆ ಕಾಯಿದೆ ಅಡಿಯಲ್ಲಿ ಕಠಿಣ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.



ಮಾರುತಿ ನಾಯಕ, ದೊಡ್ಡಪ್ಪ ಹೂಗಾರ್,ವಿಜಯಕುಮಾರ್, ರಾಜಶೇಖರ್.ಸಿ, ಚಿದಾನಂದ ಸ್ವಾಮಿ ,ಮಲ್ಲಯ್ಯ ಸ್ವಾಮಿ,ಸುರೇಶ್ ನಾಡಗೌಡ,ಹನುಮನ ಗೌಡ, ರಾಮಣ್ಣ ಪೂಜಾರಿ, ಮಂಜುನಾಥ್ ,ಶರಣಬಸವ ,ಭೀಮರಾವ್, ಈರಣ್ಣ ನಾಯಕ್, ಹನುಮಂತ್ರಾಯ, ವಿಶ್ವನಾಥ್, ನಿಂಗಪ್ಪ ಮಡಿವಾಳ,ವಿಜಯ್ ಕುಮಾರ್ ,ಶರಣ ಬಳೆಗಾರ ,ಲಿಂಗರಾಜ್, ಬಸವರಾಜ್ ಹೂಗಾರ್ ,ರುಕ್ಮಪುರ್, ವೆಂಕಟರಮಣ ನಾಯಕ ಸೇರಿದಂತೆ ಇನ್ನಿತರರು ಇದ್ದರು.

## ಮಾದಕ ವಸ್ತುಗಳ ಮಾರಾಟ ಮತ್ತು ಸೇವನೆ ಕಾನೂನು ಪ್ರಕಾರ ಅಪರಾಧ : ಪಿಎಸ್ಐ ಗಂಗಪ್ಪ ಬುರ್ಲಿ

**ಯುವ ಮಾರ್ಗ ಸುದ್ದಿ**

**ಲಿಂಗಸುಗೂರು,ಅ.8**–ಭಾರತದಲ್ಲಿ, ಮಾದಕ ವಸ್ತುಗಳ ನಿಯಂತ್ರಣ ಕಾಯ್ದೆಯು "ನಾರ್ಕೋಟಿಕ್ ಡ್ರಗ್ಸ್ ಮತ್ತು ಸೈಕೋಟ್ರೋಪಿಕ್ ಸಬ್ಸ್ಟೆನ್ಸ್ ಕಾಯಿದೆ, 1985" (NDPS ಕಾಯಿದೆ) ಕಾಯ್ದೆಯ ಪ್ರಕಾರ ಮಾದಕ ದ್ರವ್ಯ ಅಥವಾ ಸೈಕೋಟ್ರೋಪಿಕ್ ವಸ್ತುವಿನ ಉತ್ಪಾದನೆ, ಮಾರಾಟ, ಸಾಗಣೆ, ಸಂಗ್ರಹಣೆ ಮತ್ತು ಸೇವನೆಯನ್ನು ನಿಷೇಧಿಸುತ್ತದೆ.ಇಂತಹ ಪ್ರಕರಣಗಳಲ್ಲಿ ಭಾಗಿಯಾದರೆ ಕಠಿಣವಾದ ಶೀಕ್ಷೆ ಆಗುತ್ತದೆ ಎಂದು ಲಿಂಗಸುಗೂರ ಪಿಎಸ್ಐ ಗಂಗಪ್ಪ ಬುರ್ಲಿ ವಿದ್ಯಾರ್ಥಿಗಳಿಗೆ ಜಾಗೃತಿ ಮೂಡಿಸಿದರು.

ಪಟ್ಟಣದ ಉಮಾಮಹೇಶ್ವರಿ ಪದವಿ ಪೂರ್ವ ಕಾಲೇಜಿನಲ್ಲಿ ಹಮ್ಮಿಕೊಂಡ ರಾಯಚೂರು ಜಿಲ್ಲಾ ಲಿಂಗಸುಗೂರ ಪೊಲೀಸ್ ಠಾಣೆ ವತಿಯಿಂದ ಹಮ್ಮಿಕೊಂಡ ಕಾನೂನು ಅರಿವು ಮತ್ತು ಮಾದಕ ವಸ್ತುಗಳ ನಿಷೇದ ಜಾಗೃತಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಮಾದಕ ವಸ್ತುಗಳ ನಿಷೇಧವು ಕೇವಲ ಕಾನೂನು ಕ್ರಮಗಳಷ್ಟೇ ಅಲ್ಲದೆ,ತಡೆಗಟ್ಟುವಿಕೆ ಮತ್ತು ಚಿಕಿತ್ಸೆಗಳನ್ನು ಒಳಗೊಂಡಿರುವ ಒಂದು ಸಮಗ್ರ ಪ್ರಯತ್ನವಾಗಿದೆ, ಇದು ಸಮುದಾಯ ಮತ್ತು ಕುಟುಂಬ ಮಟ್ಟದ ನಿರಂತರ ಪ್ರಯತ್ನಗಳ ಮೂಲಕ ಜಾರಿಗೆ ಬರುತ್ತದೆ. ಉದಾಹರಣೆಗೆ ಕುಟುಂಬಗಳಲ್ಲಿ ಸ್ಥಿರವಾದ ನಿಯಮಗಳನ್ನು ಅಳವಡಿಸುವುದು ಮತ್ತು ಮಕ್ಕಳು ಹಾಗೂ ಯುವಕರೊಂದಿಗೆ ಮುಕ್ತವಾಗಿ ಮಾತನಾಡುವುದು ಇದು ಮಾದಕ ವಸ್ತುಗಳ ಬಳಕೆಯನ್ನು ಕಡಿಮೆ ಮಾಡುವಲ್ಲಿ ಪ್ರಮುಖ ಪಾತ್ರವಹಿಸುತ್ತದೆ



ಎಂದು ಹೇಳಿದರು.

ಇದಕ್ಕಿಂತ ಮೊದಲು ಮತ್ತೊಬ್ಬ ತಾಲೂಕ ಪಿಎಸ್ಐ ಆದ ರತ್ನಮ್ಮ ಮಾತನಾಡಿ, ಯಾವ ವಸ್ತುಗಳು ಮನುಷ್ಯನ ಮೇಲೆ ಪರಿಣಾಮ ಬಿರುತ್ತಾವೋ ಅಂತವುಗಳು ಮಾದಕ ವಸ್ತಗಳು, ಗಾಂಜಾ, ಡ್ರಗ್ಸ ಸೇವನೆ ಮನುಷ್ಯನಿಗೆ ದಾರಿ ತಪ್ಪಿಸುವ ಕೆಲಸ ಮಾಡುತ್ತವೆ.ಮಾದಕ ವಸ್ತುಗಳನ್ನು ಯಾವುದೇ ಕಾರಣಕ್ಕೂ ಬೆಳೆಯಲು ಮತ್ತು ಸೇವಿಸಲು ಅವಕಾಶ ಇಲ್ಲ, ಈ ಕಾರ್ಯದಲ್ಲಿ ತೊಡಗಿದ ವ್ಯಕ್ತಿಗೆ ನ್ಯಾಯಾಲಯದಲ್ಲಿ ಬೇಲು ಸಿಗುವದಿಲ್ಲ ಮತ್ತುಛ18 ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳು ಲೈಂಗಿಕ ದೌರ್ಜನ್ಯಕ್ಕೆ ಒಳಪಟ್ಟರೆ ಇದು ಪೋಸ್ಕೊ ಕಾಯ್ದೆಯಡಿ ನಾನ್ ಬೆಳೆಬಲ್ ಕೆಸಾಗುತ್ತೆ ಹಾದಿಹರೆಯದ ಯುವಕ ಯುವತಿಯರು ಮೋಸದ ಬಲಗೆ ಬೀಳಬೇಡಿ ಎಂದು ಪೋಸ್ಕೊ ಕಾಯ್ದೆಯ ಬಗ್ಗೆ ಜಾಗೃತಿ ಮೂಡಿಸಿದರು.

ಕಾನೂನು ತಯಾರಾಕರು ನಾವೇ, ಕಾನೂನು ಮುರುಯುವರು ನಾವೇ ಎಂದು ಗುಟುಕಾ,ಸರಾಯಿ, ಬೀಡಿ, ಸಿಗರೇಟ್ ಇನ್ನೂ ಮುಂತಾದ ಮಾದಕಗಳ ದಾಸರಾಗಬೇಡಿ ಎನ್ನುತ್ತಾ ಹೆಣ್ಣೊಂದು ಕಲಿತರೆ ಶಾಲೆಯೊಂದು ತೆರೆ ದಂತೆ ಓದಿನ ಕಡೆ ಗಮನ ಕೊಡಿ.ಕ್ಷಣಿಕ ಸುಖಕ್ಕೆ ಬಲಿಯಾಗಬೇಡಿ, 2012 ರಲ್ಲಿ ನಡೆದ ನಿರ್ಭಯ ಪ್ರಕರಣದ ನಂತರ ಪೋಸ್ಕೊ ಕಾಯ್ದೆಯನ್ನು ಹೆಣ್ಣು ಮಕ್ಕಳ ರಕ್ಷಣೆಗಾಗಿ ಜಾರಿಗೆ ತರಲಾದೆ ಎಂದು ಹೆಣ್ಣು ಮಕ್ಕಳ ಜಾಗೃತಿ ಕುರಿತು ಮನಮು ಟ್ಟುವಂತೆ ಹೇಳಿದರು.

ರಂಗನಾಥ ಪೊಲೀಸರು ಮೊಬೈಲ್ ಹ್ಯಾಕ್, ಬ್ಯಾಂಕ್ ಅಕೌಂಟ್ ಹ್ಯಾಕ್ ಗಳ ಜೊತೆಗೆ ಪೋಕ್ಸೋ ಕಾಯ್ದೆಯ ಬಗ್ಗೆ ಜಾಗೃತಿ ಮೋದಿಸಿದರು.

ಈ ಸಂದರ್ಭದಲ್ಲಿ ಪ್ರಾಚಾರ್ಯರಾದ ವಿರೇಶ ಆದೋನಿ, ಅಮರೇಶ ಸ್ವಾಮಿ, ಪಾರ್ವತಿ ಗಣಾಚಾರಿ, ಮಂಜುನಾಥ, ಮಸ್ತಾನ್ ಸಾಬ್,ಯಮನೂರಪ್ಪ, ಗಂಗಾಧರ, ಸ್ವರ್ಣಲತಾ, ನಿರ್ಮಲ, ಶಾಂತಲಾ, ಸಾವಿತ್ರಿ,ಸಾನಿಯಾ, ಗಂಗಾಧರ, ಸೇರಿದಂತೆ ವಿದ್ಯಾರ್ಥಿಗಳು ಇದ್ದರು.

## ಮೊದಲನೇಯ ಪುಟದಿಂದ

# ಜಾತಿ ಸಮೀಕ್ಷೆಗೆ 650 ಕೋಟಿ ವೆಚ್ಚ : ಅಶೋಕ್ ಆಕ್ರೋಶ

ಜಾತಿಗಣ ತಿಯಿಂದ ಕನ್ನಡಿಗರಿಗೆ ನಯಾ ಪೈಸೆ ಉಪಯೋಗವಿಲ್ಲ. ಕಾಂಗ್ರೆಸ್ ಸರ್ಕಾರ, ಈಗ ಮತ್ತೊಮ್ಮೆ 650 ಕೋಟಿ ರೂಪಾಯಿ ಕನ್ನಡಿಗರ ತೆರಿಗೆ ಹಣವನ್ನು ಬೇಕಾಬಿಟ್ಟಿ ಪೋಲು ಮಾಡುತ್ತಿದೆ ಎಂದು ವಾಗ್ದಳಿ ನಡೆಸಿದ್ದಾರೆ.

ಬೆಲೆ ಇಳಿಕೆ ಯಾವಾಗ?

ಮತ್ತೊಂದು ಪೋಸ್ಟ್ ನಲ್ಲಿ ಕಳೆದ ಎರಡು ವರ್ಷಗಳಿಂದ ಸತತವಾಗಿ ಏರಿಸಿರುವ ಹಾಲು, ಪೆಟ್ರೋಲ್, ಡಿಸೇಲ್, ನೀರು, ವಿದ್ಯುತ್ ಬೆಲೆಯನ್ನು ಇಳಿಸುವುದು ಯಾವಾಗ? ಎಂದು ಅಶೋಕ್ ಸರ್ಕಾರವನ್ನು ಪ್ರಶ್ನಿಸಿದ್ದಾರೆ.

ಗ್ಯಾರಂಟಿ ಸಿದ್ದರಾಮಯ್ಯ ಟ್ಯಾಕ್ (ಜಿಎಸ್ ಟಿ) ಎಂದು ವ್ಯಂಗ್ಯವಾಡಿರುವ ಅಶೋಕ್, ಕಾಂಗ್ರೆಸ್ ಸರ್ಕಾರದಿಂದ ಕನ್ನಡಿಗರಿಗೆ ಮುಕ್ತಿ ಯಾವಾಗ? ಎಂದು ತರಾಟೆಗೆ ತೆಗೆದುಕೊಂಡಿದ್ದಾರೆ. ಜಿಎಸ್‌ಟಿ ಸುಧಾರಣೆ ನಂತರ ದಿನಬಳಕೆ ವಸ್ತುಗಳಿಂದ ಹಿಡಿದು ಬೈಕು–ಕಾರುಗಳವರೆಗೆ ದೇಶಾದ್ಯಂತ ವ್ಯಾಪಾರ ವಹಿವಾಟು ಜೋರಾಗಿದ್ದು, ಜನಸಾಮಾನ್ಯರು ಸಂತೋಷದಿಂದ ಜಿಎಸ್‌ಟಿ ಉಳಿತಾಯದ ಲಾಭ ಪಡೆಯುತ್ತಿದ್ದಾರೆ. ವ್ಯಾಪಾರಸ್ಥರು, ವರ್ತಕರು ಸಂತೋಷಗೊಂಡಿದ್ದಾರೆ.ಆದರೆ ರಾಜ್ಯದಲ್ಲಿರುವ ಜನವಿರೋಧಿ ಕಾಂಗ್ರೆಸ್ ಸರ್ಕಾರ ಯಾವುದಕ್ಕೂ ಮುಂದಾಗಿಲ್ಲ ಎಂದು ಅವರು ವಾಗ್ದಾಳಿ ನಡೆಸಿದ್ದಾರೆ.

ಈರುಳ್ಳಿ ಬೆಳೆಗಾರರ ಸಂಕಷ್ಟಕ್ಕೆ ಸ್ಪಂದಿಸಿ

ಇನ್ನೊಂದು ಪೋಸ್ಟ್ ನಲ್ಲಿ ತೀವ್ರ ಸಂಕಷ್ಟದಲ್ಲಿರುವ ಈರುಳ್ಳಿ ಬೆಳೆಗಾರರ ಸಂಕಷ್ಟಕ್ಕೆ ರಾಜ್ಯ ಸರ್ಕಾರ ತಕ್ಷಣವೇ ಧಾವಿಸಿ, ಉತ್ತಮ ಬೆಲೆ ಸಿಗುವಂತಹ ವ್ಯವಸ್ಥೆ ಮಾಡಬೇಕು. ಇದೇ ರೀತಿ ಬೆಲೆ ಕಡಿಮೆಯಾದರೆ ಈರುಳ್ಳಿ ಬೆಳೆಗಾರರು ಬೀದಿಗೆ ಬೀಳುತ್ತಾರೆ. ಕೂಡಲೇ ರಾಜ್ಯ ಸರ್ಕಾರ ರೈತರಿಗೆ ಉತ್ತಮ ಬೆಲೆ ಸಿಗುವಂತಹ ವ್ಯವಸ್ಥೆ ಮಾಡಬೇಕು ಎಂದು ಒತ್ತಾಯಿಸಿದ್ದಾರೆ. ನೆರೆ ಪ್ರದೇಶಕ್ಕೆ ಸಿಎಂ ಕಾಟಾಚಾರದ ವೈಮಾನಿಕ ಪರಿಶೀಲನೆ ಯಾತ್ರೆ, ಕುರ್ಚಿ ದಕ್ಕಿಸಿಕೊಳ್ಳಲು ಡಿಸಿಎಂ ಪದೇ ಪದೇ ದೆಹಲಿ ದಂಡಯಾತ್ರೆ.ರೈತರು ಬೆವರು ಸುರಿಸಿ ಬೆಳೆದ ಬೆಳೆಗೆ ಶವಯಾತ್ರೆ. ಇದು ರೈತ ವಿರೋಧಿ ಕಾಂಗ್ರೆಸ್ ಸರ್ಕಾರದಲ್ಲಿ ಕರ್ನಾಟಕದ ರೈತರ ಪಾಡು ಎಂದು ಸರ್ಕಾರದ ವಿರುದ್ಧ ಅವರು ವಾಗ್ದಾಳಿ ನಡೆಸಿದ್ದಾರೆ.

ಲಕ್ಷಾಂತರ ರೂಪಾಯಿ ಖರ್ಚು ಮಾಡಿ ತಿಂಗಳುಗಟ್ಟಲೆ ಶ್ರಮವಹಿಸಿ ದುಡಿದ ರೈತರಿಗೆ ಈ ಬಾರಿ ಈರುಳ್ಳಿ ಕಣ್ಣೀರು ತರಿಸುತ್ತಿದೆ. ಪ್ರತಿ ಕ್ವಿಂಟಲ್‌ಗೆ 3,000– 4,000 ರೂಪಾಯಿ ಸಿಗುತ್ತಿದ್ದದ್ದು, ಈಗ ಕ್ವಿಂಟಲ್ಗೆ 100–200 ರೂಪಾಯಿಗಳಿಗೆ ದಿಢೀರನೆ ಬೆಲೆ ಕುಸಿದಿದ್ದು ಸಾಗಾಟದ ವೆಚ್ಚಕ್ಕೂ ಹಣ ಸಿಗದೆ ರೈತರು ಕಂಗಾಲಾಗಿದ್ದಾರೆ ಎಂದು ಅಶೋಕ್ ಸರ್ಕಾರದ ಗಮನವನ್ನು ಸೆಳೆದಿದ್ದಾರೆ.

# ಭಾರತದ ಮೊದಲ ಹೆವಿ–ಡ್ಯೂಟಿ ಬ್ಯಾಟರಿ ವಿನಿಮಯ ಕೇಂದ್ರಕ್ಕೆ ಚಾಲನೆ

ಸಭೆಯನ್ನುದ್ದೇಶಿಸಿ ಮಾತನಾಡಿದ ಸಚಿವ ಕುಮಾರಸ್ವಾಮಿ ಅವರು; "ಪ್ರಧಾನಿ ನರೇಂದ್ರ ಮೋದಿ ಅವರ ದೂರದೃಷ್ಟಿಯ ನಾಯಕತ್ವದಲ್ಲಿ 2047ರ ವೇಳೆಗೆ ಇಂಧನ ಸ್ವಾತಂತ್ರ್ಯ ಮತ್ತು 2070ರ ವೇಳೆಗೆ ಇಂಗಾಲದ ಹೊರಸೂಸುವಿಕೆಯ ನಿವ್ವಳ ಶೂನ್ಯದತ್ತ ಭಾರತದ ನಡೆಸುತ್ತಿರುವ ಪ್ರಯಾಣದಲ್ಲಿ ಈ ಅಭಿವೃದ್ಧಿಯು ಹೆಮ್ಮೆಯ ಮೈಲಿಗಲ್ಲು" ಎಂದು ಬಣ್ಣಿಸಿದರು.

ಭಾರೀ ವಾಣಿಜ್ಯ ವಾಹನಗಳನ್ನು ಇಂಗಾಲ ಮುಕ್ತಗೊಳಿಸುವ ತುರ್ತು ಅಗತ್ಯವನ್ನು ಅವರು ಒತ್ತಿ ಹೇಳಿದರು. ಇವು ವಾಹನ ಜನಸಂಖ್ಯೆಯ 5%ಕ್ಕಿಂತ ಕಡಿಮೆ ಇದ್ದರೂ, ಸಾರಿಗೆ ಸಂಬಂಧಿತ ಹೊರಸೂಸುವಿಕೆಯಲ್ಲಿ ಸುಮಾರು ಅರ್ಧದಷ್ಟು ಪಾಲು ಹೊಂದಿವೆ. "ನಮ್ಮ ಸಾಗಾಣೆ ಕ್ಷೇತ್ರದ ಈ ಬೆನ್ನೆಲುಬನ್ನು ಬಲಿಷ್ಠವಾಗಿ ಪರಿವರ್ತಿಸುವುದು ಪರಿಸರ ಸುಸ್ಥಿರತೆ ಮತ್ತು ಆರ್ಥಿಕ ಸ್ಪರ್ಧಾತ್ಮಕತೆಗೆ ಅತ್ಯಗತ್ಯ" ಎಂದು ಅವರು ಪ್ರತಿಪಾದಿಸಿದರು.

ಸರ್ಕಾರದ ಪೂರ್ವಭಾವಿ ಕ್ರಮಗಳನ್ನು, ಅದರಲ್ಲೂ ವಿಶೇಷವಾಗಿ ಮಧ್ಯಮ ಮತ್ತು ಹೆವಿಡ್ಯೂಟಿ ಎಲೆಕ್ಟ್ರಿಕ್ ಟ್ರಕ್‌ಗಳನ್ನು ಮೊದಲ ಬಾರಿಗೆ ರಾಷ್ಟ್ರೀಯ ಪ್ರೋತ್ಸಾಹಕ ಚೌಕಟ್ಟಿನ ಅಡಿಯಲ್ಲಿ ತರುವ PM e–DRIVE ಯೋಜನೆಯ ಬಗ್ಗೆ ಇದೇ ಸಂದರ್ಭದಲ್ಲಿ ಸಚಿವರು ಒತ್ತಿ ಹೇಳಿದರು. ಇ–ಟ್ರಕ್‌ಗಳಿಗೆ ?500 ಕೋಟಿ ಮತ್ತು ಮೂಲಸೌಕರ್ಯವನ್ನು ಚಾರ್ಜ್ ಮಾಡಲು ಮತ್ತು ವಿನಿಮಯ ಮಾಡಲು ?2,000 ಕೋಟಿ ಮೀಸಲಿಡಲಾಗಿದೆ ಎಂದು ಅವರು ಹೇಳಿದರು.

ಬ್ಯಾಟರಿ ವಿನಿಮಯವು ಮುಂಗಡ ವೆಚ್ಚಗಳನ್ನು ಕಡಿಮೆ ಮಾಡುತ್ತದೆ. ತಂತ್ರಜ್ಞಾನದ ಅಪಾಯಗಳನ್ನು ಕಡಿಮೆ ಮಾಡುತ್ತದೆ. ವಾಹನಗಳ ಸ್ಥಗಿತದ ಸಮಯವನ್ನು ಕಡಿಮೆ ಮಾಡುತ್ತದೆ ಮತ್ತು ಭಾರತದ 90% ಸಣ್ಣ ಫ್ಲೀಟ್ ಆಪರೇಟರ್ ಬೇಸ್‌ಗೆ ಹಣಕಾಸು ಕಾರ್ಯಸಾಧ್ಯತೆಯ ಪ್ರಯೋಜನಗಳನ್ನು ಹೇಗೆ ಸಕ್ರಿಯಗೊಳಿಸುತ್ತದೆ ಎಂಬುದನ್ನು ಕುಮಾರಸ್ವಾಮಿ ಅವರು ವಿಸ್ತಾರವಾಗಿ ವಿವರಿಸಿದರು.

"ಈ ಉಪಕ್ರಮವು ಕೇವಲ ತಂತ್ರಜ್ಞಾನದ ಬಗ್ಗೆ ಅಲ್ಲ, ಜಾಗತಿಕ ಸ್ವಚ್ಛ ಸಾರಿಗೆ ಆಂದೋಲನವನ್ನು ಮುನ್ನಡೆಸುವ ಭಾರತದ ಸಂಕಲ್ಪದ ಬಗ್ಗೆ ಇದು ನೀತಿ, ನಾವೀನ್ಯತೆ ಮತ್ತು ಉದ್ಯಮ ಸಹಯೋಗದ ಶಕ್ತಿಯನ್ನು ಒಟ್ಟಿಗೆ ಪ್ರದರ್ಶಿಸುತ್ತದೆ" ಎಂದು ಸಚಿವರು ಹೇಳಿದರು.

ಈ ಕಾರ್ಯಕ್ರಮವು ಸುಧಾರಿತ ವಿನಿಮಯ ಮಾಡಬಹುದಾದ ಬ್ಯಾಟರಿ–ಸಜ್ಜಿತ ಇಖಓ ಟ್ರಾಕ್ಟರ್–ಟ್ರೇಲರ್‌ಗಳ ಫ್ಲಾಗ್–ಆಫ್ ಮತ್ತು ಸಾಗಣೆದಾರರೊಂದಿಗೆ ಮೊದಲ ಬ್ಯಾಟರಿ–ಆಸ್–ಎ–ಸರ್ವಿಸ್ (BaaS) ಒಪ್ಪಂದಗಳಿಗೆ ಸಹಿ ಹಾಕಿತು. ಮುಖ್ಯ ಅತಿಥಿಯಾಗಿ ಹಾಜರಿದ್ದ ನಿತಿನ್ ಗಡ್ಕರಿ ಅವರು, ಸಾಗಣೆ ವೆಚ್ಚಗಳನ್ನು ಕಡಿಮೆ ಮಾಡುವ, ದಕ್ಷತೆಯನ್ನು ಹೆಚ್ಚಿಸುವ ಮತ್ತು ಹಸಿರು ಸರಕು ವಲಯವನ್ನು ಬಲಪಡಿಸಿಕೊಳ್ಳುವ ಕಡೆಗೆ ಒಂದು ನಿರ್ಣಾಯಕ ಹೆಜ್ಜೆ ಇದಾಗಿದೆ ಎಂದು ಶ್ಲಾಘಿಸಿದರು.

# ಭೀಮಾ ನದಿ ಪ್ರವಾಹದಿಂದ ತತ್ತರಿಸಿರುವ ಮಣ್ಣೂರ ಹರಿಜನವಾಡಾ ಶಾಶ್ವತ ಸ್ಥಳಾಂತರದ ಭರವಸೆ

**ಕರಜಗಿ,ಅ.8–**ಭೀಮಾನದಿಯ ಪ್ರವಾಹದಿಂದ ಪ್ರತಿ ವರ್ಷ ಸಂಕಷ್ಟ ಎದುರಿಸುತ್ತಿರುವ ಅಫಜಲಪುರ ತಾಲೂಕಿನ ಮಣ್ಣೂರ ಗ್ರಾಮದ ಹರಿಜನವಾಡಾ ಬಡಾವಣೆಗೆ ಕೆ ಕೆ ಆರ್ ಟಿ ಸಿ ಅಧ್ಯಕ್ಷ ಅರುಣ ಕುಮಾರ ಎಂ ವೈ ಪಾಟೀಲ ಅವರು ಭೇಟಿ ನೀಡಿ ಪರಿಶೀಲಿ ಸಿದರು.

ಈ ಸಂದರ್ಭದಲ್ಲಿ ಬಡಾವಣೆಯ ನಿವಾಸಿಗಳು ಮಾತನಾಡಿ ಪ್ರತಿ ವರ್ಷ ಭೀಮಾ ನದಿಗೆ ಪ್ರವಾಹ ಬಂದಾಗ ನಮ್ಮ ಬಡಾವಣೆ ಸಂಪೂರ್ಣ ಮುಳುಗಡೆ ಆಗುತ್ತದೆ ನಮಗೆ ಶಾಶ್ವತ ಸ್ಥಳಾಂತರದ ವ್ಯವಸ್ಥೆ ಮಾಡಬೇಕು ಎಂದು ಕೇಳಿಕೊಂಡರು ಇದಕ್ಕೆ ಪ್ರತಿಕ್ರಿಯಿಸಿದ ಅರುಣಕುಮಾರ ಎಂ ಪಾಟೀಲ ಮಾತನಾಡಿ ನಿಮ್ಮ ಬಡಾವಣೆ ಸ್ಥಳಾಂತರದ ಬಗ್ಗೆ ಈಗಾಗಲೇ ಸರ್ಕಾರಕ್ಕೆ ಜಿಲ್ಲಾ ಉಸ್ತುವಾರಿ ಸಚಿವರು ಹಾಗೂ ಜಿಲ್ಲಾಧಿಕಾರಿಗಳ ಗಮನಕ್ಕೆ ತರಲಾಗಿದೆ ಆದಷ್ಟು ಬೇಗನೆ ಗ್ರಾಮ ಪಂಚಾಯತಿ ಸಾಮಾನ್ಯ ಸಭೆಯಲ್ಲಿ ಬಡಾವಣೆ ಸ್ಥಳಾಂತರದ ಬಗ್ಗೆ ಠರಾವು ಪಾಸು ಮಾಡಿ ತಾಲೂಕು ಪಂಚಾಯತ ಹಾಗೂ ಜಿಲ್ಲಾ ಪಂಚಾಯತ ಮೇಲಾಧಿಕಾರಿಗಳಿಗೆ ಕಳಿಸಿರಿ ಅಂದಾಗ ಮಾತ್ರ ಬಡಾವಣೆ ಸ್ಥಳಾಂತರದ ಬಗ್ಗೆ ಕಾರ್ಯರೂಪಕ್ಕೆ ಬರಲು ಸಾಧ್ಯ ವಾಗುತ್ತದೆ.ಕೇವಲ ಪ್ರವಾಹ ಬಂದಾಗ ಮಾತ್ರ ಸ್ಥಳಾಂತರದ ಬಗ್ಗೆ ವಿಚಾರ ಮಾಡಬೇಡಿರಿ ಈ ವಿಷಯದ ಬಗ್ಗೆ ಮೇಲಿಂದ ಮೇಲೆ ಅಧಿಕಾರಿಗಳ ಗಮನಕ್ಕೆ ತರುವ ಪ್ರಯತ್ನ ಮಾಡಿರಿ.ಈ ಪ್ರಕ್ರಿಯೆಗೆ.

ಸುಮಾರು ಏಳೆಂಟು ತಿಂಗಳುಗಳ ಕಾಲಾವಕಾಶ ಬೇಕಾಗುತ್ತದೆ. ಬಡಾವಣೆಯ ನಿವಾಸಿಗಳು ಮುಖಂಡರು ಮೇಲಿಂದ ಮೇಲೆ ಈ ವಿಷಯದ ಬಗ್ಗೆ ಶಾಸಕರು ಜಿಲ್ಲಾ ಉಸ್ತುವಾರಿ ಸಚಿವರು ಹಾಗೂ ಜಿಲ್ಲಾಧಿಕಾರಿಗಳ ಗಮನಕ್ಕೆ ತಂದಾಗ ಮಾತ್ರ ಸ್ಥಳಾಂತರದ ಕೆಲಸವಾಗುತ್ತದೆ.ಆದಷ್ಟು



ಬೇಗನೆ ಮುಂದಿನ ದಿನಗಳಲ್ಲಿ ಸರ್ಕಾರ ಹಾಗೂ ಜಿಲ್ಲಾ ಉಸ್ತುವಾರಿ ಸಚಿವರು ಜಿಲ್ಲಾಧಿಕಾರಿಗಳ ಜೊತೆಗೆ ಚರ್ಚಿಸಿ ಹರಿಜನವಾಡಾ ಬಡಾವಣೆ ಶಾಶ್ವತ ಸ್ಥಳಾಂತರದ ವ್ಯವಸ್ಥೆ ಮಾಡಲಾಗುವುದು ಎಂದು ಭರವಸೆ ನೀಡಿದರು

ಈ ಸಂದರ್ಭದಲ್ಲಿ ಮುಖಂಡರಾದ ಮಹಾದೇವಪ್ಪ ಕರೂಟಿ ಸಿದ್ದಪ್ಪ ಹತ್ತರಕಿ ಬಸವರಾಜ ವಾಯಿ ವಿವೇಕಾನಂದ ಕೋಗಟ ನೂರ ಬಸವರಾಜ ಕರೂಟಿ ಇರ್ಫಾನ್ ಜಮಾದಾರ ಚನ್ನುಗೌಡ ಕರೂಟಿ ಯಶ್ವಂತ ಕರೂಟಿ ಭೀಮಾಶಂಕರ ಪೂಜಾರಿ ಜಗದೀಶ ದೇಶಟ್ಟಿ ಸಂತೋಷ ಅಲ್ಲಾಪೂರ ಮಹಾಂತೇಶ ಜಕಾಪೂರ ನಿಖಿಲ ಚಣೇಗಾಂವ ರಾಜಶೇಖರ ಪ್ಯಾಟಿ ಮಹಿಬೂಬ ಗೌರ ವೇಣುಮಾಧವ ಅವಧಾನಿ ಶ್ರೀಕಾಂತ ನಿವರಗಿ ಅಸ್ಪಾಕ ರುಕ್ಮೋದ್ದಿನ ಬಸವರಾಜ ಜನ್ನಾ ಗಡ್ಡೆಪ್ಪ ಬಸ್ಸಿನಕರ ಮಲ್ಲಪ್ಪ ಹಿಟ್ಟಿನ ಶೇಖರ ಶೆಟ್ಟಿ ಯಲ್ಲಪ್ಪ ನಡುವಿನಕೇರಿ ರಾಜಕುಮಾರ ನಡುವಿನಕೇರಿ ಪರಶುರಾಮ ನಡುವಿನಕೇರಿ ಯಶ್ವಂತ ನಡು ವಿನಕೇರಿ ಸೇರಿದಂತೆ ಬಡಾವಣೆಯ ನಿವಾಸಿಗಳಿದ್ದರು

## ಲಕ್ಕಂದಿನ್ನಿ: ಲಿಂ: ಶ್ರೀಶಿವಮೂರ್ತಿ ಶಿವಯೋಗಿಗಳ 47ನೇ ಪುಣ್ಯಸ್ಮರಣೋತ್ಸವ ವಿಜೃಂಭಣೆಯಿಂದ ಜರುಗಿದ ಉಚ್ಚಾಯ ಮಹೋತ್ಸವ

ಯುವ ಮಾರ್ಗ ಸುದ್ದಿ



**ಸಿರವಾರ, ಅ.8–**ತಾಲೂಕಿನ ಲಕ್ಕಂದಿನ್ನಿ ಗ್ರಾಮದ ಆರಾಧ್ಯ ದೈವರಾದ ಪರಮ ಪೂಜ್ಯ ಲಿಂ: ಶ್ರೀ ಶಿವಮೂರ್ತಿ ಶಿವಯೋಗಿಗಳ 47ನೇ ಪುಷ್ಯಸ್ಮರಣೋತ್ಸವದ ನಿಮಿತ್ಯ ಅವರ ಉಚ್ಚಾಯ ಮಹೋತ್ಸವವು ಸೋಮವಾರ ಸಂಜೆ ಅತ್ಯಂತ ವಿಜೃಂಭಣೆ ಯಿಂದ ಜರುಗಿತು.

ಸಿರವಾರ ತಾಲೂಕಿನ ಲಕ್ಕಂದಿನ್ನಿ ಗ್ರಾಮದಲ್ಲಿ ಪ್ರತಿ ವರ್ಷ ದಂತೆ ಈ ವರ್ಷವೂ ಕೂಡ ಗ್ರಾಮದ ಆರಾಧ್ಯದೈವರಾದ ಪರಮ ಪೂಜ್ಯ ಲಿಂ. ಶ್ರೀಶಿವಮೂರ್ತಿ ಶಿವಯೋಗಿಗಳ 47ನೇ ಪುಣ್ಯಸ್ಮರಣಾ ನಿಮಿತ್ಯ ಜಾತ್ರಾ ಮಹೋತ್ಸವವು ಅತಿ ಅದ್ದೂರಿಯಾಗಿ ಜರುಗಿತು, ಭಾನುವಾರ ರಾತ್ರಿ 9 ಗಂಟೆಯಿಂದ ಭಜನೆ ಮಂಡಳಿಯಿಂದ ಭಜನೆ ಕಾರ್ಯಕ್ರಮ, 11:30 ರಿಂದ 2 ಗಂಟೆವರೆಗೆ ಕಳಸಾರೋಹಣ ಕಾರ್ಯಕ್ರಮಗಳು ಜರುಗಿದವು, ಸೋಮವಾರ ಬೆಳಿಗ್ಗೆ 10 ರಿಂದ 11:30ರ ವರೆಗೆ ಧ್ವಜಾರೋಹಣ ಕಾರ್ಯಕ್ರಮ ನಂತರ ಭೂರಿ ಗಣಾರಾಧನೆ ನೆರವೇರಿಸಲಾಯಿತು.

ಸಂಜೆ 6 ಗಂಟೆಗೆ ಪರಮ ಪೂಜ್ಯ ಲಿಂ: ಶ್ರೀ ಶಿವಮೂರ್ತಿ ಶಿವಯೋಗಿಗಳ ಉಚ್ಚಾಯ ಮಹೋತ್ಸವವು ಅಪಾರ ಭಕ್ತ ಸಮೂಹದ ಮಧ್ಯೆ ಅತ್ಯಂತ ವಿಜೃಂಭಣೆಯಿಂದ ಜರುಗಿತು.

ಉಚ್ಚಾಯ ಮಹೋತ್ಸವ ಕಾರ್ಯಕ್ರಮದಲ್ಲಿ ದೇವಸ್ಥಾನದ ಅರ್ಚಕರು, ಲಕ್ಕಂದಿನ್ನಿ ಸೇರಿದಂತೆ ಸುತ್ತಮುತ್ತಲ ಗ್ರಾಮಗಳ ಸಾವಿರಾರು ಭಕ್ತರು ಭಾಗವಹಿಸಿ ಶಿವಪ್ಪ ತಾತಾನವರ ಕೃಪೆಗೆ ಪಾತ್ರರಾದರು

# ವಾಲ್ಮೀಕಿ ಸಮುದಾಯ ಭವನ ನಿರ್ಮಾಣಕ್ಕೆ 1 ಕೋಟಿ ಅನುದಾನ: ಶಾಸಕ ಪಾಟೀಲ



**ಹುಮನಾಬಾದ್ ,ಅ.8–**ವಾಲ್ಮೀಕಿ ಸಮುದಾಯದ ನಿವೇಶನದಲ್ಲಿ ಬೃಹತ್ ಗಾತ್ರದ ವಾಲ್ಮೀಕಿ ಸಮುದಾಯ ಭವನ ನಿರ್ಮಾಣಕ್ಕೆ 1.ಕೋಟಿ ಅನುದಾನ ನೀಡುವುದಾಗಿ ಎಂದು ಶಾಸಕ ಡಾ.ಸಿದ್ದು ಪಾಟೀಲ್ ಹೇಳಿದರು.

ಮಂಗಳವಾರ ಹಮ್ಮಿಕೊಂಡ ಮಹರ್ಷಿ ವಾಲ್ಮೀಕಿ ಜಯಂತಿ ಆಚರಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಬಡತನದಿಂದ ಕೂಡಿರುವ ಈ ಸಮುದಾಯದವರು ಮಕ್ಕಳು ಮದುವೆ ಮತ್ತಿತರ ಶುಭ ಸಮಾರಂಭಕ್ಕೆ ಶಾಮಿಯಾನ ಇತ್ಯಾದಿಗೆ ತಗಲುವ ಲಕ್ಷಾಂತರ ಹಣ ಭರಿಸುವುದು ಕಷ್ಟಸಾಧ್ಯ. ಸಮುದಾಯ ಭವನ ನಿರ್ಮಾಣವಾದರೇ ಸಮಸ್ಯೆಗೆ ಶಾಶ್ವತ ಪರಿಹಾರ ಸಿಕ್ಕಂತಾಗುತ್ತದೆ ಎಂದರು.

ವಿಧಾನ ಪರಿಷತ್ ಸದಸ್ಯ ಡಾ.ಚಂದ್ರಶೇಖರ ಪಾಟೀಲ್ ಮಾತನಾಡಿ, ಕೋಲಿ ಸಮಾಜವದರು ತಮ್ಮ ಮಕ್ಕಳಿಗೆ ಗುಣಾತ್ಮಕ ಶಿಕ್ಷಣ ಕೊಡಿಸಿ ಅವರನ್ನು ಅಭಿವೃದ್ಧಿ ಪಥದತ್ತ ಕೊಂಡೊಯ್ಯಬೇಕು. ಕೋಲಿ ಸಮಾಜದ ಜೊತೆಯಲ್ಲಿ ನಮ್ಮ ಪರಿವಾರ ಹಿಂದಿನಿಂದಲೂ ಉತ್ತಮ ಬಾಂಧವ್ಯ ಹೊಂದಿದೆ ಅದನ್ನು ಉಳಿಸಿ ಬೆಳೆಸಿಕೊಂಡು ಹೋಗಬೇಕು ಎಂದರು.

ಪುರಸಭೆ ಅಧ್ಯಕ್ಷೆ ಪಾರ್ವತಿ ಶೇರಿಕಾರ, ಉಪಾಧ್ಯಕ್ಷ ಮುಕ್ರಂಜಾ, ಮುಖ್ಯಾಧಿಕಾರಿ ವನೀತಾ, ಸದಸ್ಯ ಅನೀಲ ಪಲ್ಲೇರಿ, ಸಮಾಜದ ಮುಖಂಡರಾದ ಸಂತೋಷ ಸಂಗಮ್, ಕೇಶ್ವರ ನೆಟ್ಟಿ, ಬಲವಂತ ಪೊಲ್ದಾಸ್, ಬಿಜೆಪಿ ಮಂಡಲ ಅಧ್ಯಕ್ಷ ಅನೀಲ ಪಸಾರಗಿ, ಶಿವರಾಜ ಚೀನಕೇರಿ ಸೇರಿದಂತೆ ಅನೇಕರು ಇದ್ದ

# ಶೂ ಎಸೆದ ಘಟನೆ ತಪ್ಪಿತಸ್ಥ ವಕೀಲನಿಗೆ ಉಗ್ರ ಶಿಕ್ಷೆಗೆ ಆಗ್ರಹ

**ಬಳ್ಳಾರಿ, ಅ.8–** ಸುಪ್ರೀಂ ಕೋರ್ಟಿನ ಮುಖ್ಯ ನ್ಯಾಯಾಧೀಶರಾದ ಬಿ ಅರ್ ಗವಾಯಿ ಇವರಿಗೆ ಶೂ ಎಸೆಯಲಿಕ್ಕೆ ಪ್ರಯತ್ನಿಸಿದಂತ ವಕೀಲನ ಮೇಲೆ ಸ್ವಯಂ ಪ್ರೇರಿತವಾಗಿ ರಾಷ್ಟ ದ್ರೋಹಿ ಪ್ರಕರಣ ದಾಖಲಿಸಿಕೊಂಡು ಜೀವಾವಧಿ ಶಿಕ್ಷೆಗೆ ಒಳಪಡಿಸುವಂತೆ ಛಲವಾದಿ ಮಹಾಸಭಾ (ರಿ) ಬಳ್ಳಾರಿ ಜಿಲ್ಲಾ ಸಮಿತಿ ಆಗ್ರಹಿಸಿದ್ದು, ಈ ಕುರಿತು ಜಿಲ್ಲಾಧಿಕಾರಿಗಳ ಮೂಲಕ ರಾಷ್ಟ್ರಪತಿಗಳಿಗೆ ಮನವಿಪತ್ರ ಸಲ್ಲಿಸಿದೆ.

ಸುಪ್ರೀಂ ಕೋರ್ಟಿನ ಮುಖ್ಯ ನ್ಯಾಯಮೂರ್ತಿ ಬಿ.ಆರ್ ಗವಾಯಿ ಅವರ ಮೇಲೆ ನಾಲಾಯಕ ಕಿಶೋರ್ ರಾಕೇಶ್ ಶೂ ಎಸೆತದಂಹ ಈ ಘಟನೆಯಿಂದ ಇಡೀ ಭಾರತ ದೇಶದ ನಾಗರಿಕರಿಗೆ ಎಸೆದಂತೆ ಆದ್ದರಿಂದ ಭಾರತೀಯರಾದ ನಾವುಗಳು ಇದನ್ನು ಪ್ರಬಲವಾಗಿ ವಿರೋಧಿಸಬೇಕಾಗಿದೆ ಭಾರತ ಸರ್ಕಾರ ತಕ್ಷಣವೇ ಆರೋಪಿ ವಕೀಲ ಕಿಶೋರ ರಾಕೇಶ ಇತನನ್ನು ದೇಶ ದ್ರೋಹಿ ಎಂದು ಘೋಷಿಸಿ ಸ್ವಯಂ ಪ್ರೇರಿತವಾಗಿ ಪ್ರಕರಣ ದಾಖಲಿಸಿಕೊಂಡು ಜೀವವಾದಿ ಶಿಕ್ಷೆ ವಿಧಿಸಬೇಕೆಂದು ಒತ್ತಾಯಿಸಿದೆ. ಮನವಿಪತ್ರ ಸಲ್ಲಿಸಿದ ಸಂದರ್ಭದಲ್ಲಿ ಛಲವಾದಿ ಮಹಾಸಭಾ (ರಿ) ಬಳ್ಳಾರಿ ಜಿಲ್ಲಾ ಸಮಿತಿ ಅಧ್ಯಕ್ಷ ಸಿ ಶಿವಕುಮಾರ, ಕರ್ನಾಟಕ ದಲಿತ




ರಕ್ಷಣಾ ವೇದಿಕೆ ಜಿಲ್ಲಾ ಕಾರ್ಯಾಧ್ಯಕ್ಷ ಸಿ ಹನುಮೇಶ್ ಕಟ್ಟಿಮನಿ ,ಕರ್ನಾಟಕ ದಲಿತ ರಕ್ಷಣಾ ವೇದಿಕೆ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಕೆ ಶಂಕರ್ ನಂದಿಹಾಳ, ಛಲವಾದಿ ಮಹಾಸಭಾ ಜಿಲ್ಲಾ ಪ್ರಧಾನ ಕಾರ್ಯದರ್ಶಿ

ಛಲವಾದಿ ಲೋಕೇಶ್ ಕಪಗಲ್, ಛಲವಾದಿ ಮಹಾಸಭಾ ಜಿಲ್ಲಾ ಉಪಾಧ್ಯಕ್ಷರು ಮಾನಯ್ಯ ಬಿ ಗೋನಾಳ,ಛಲವಾದಿ ಮುಖಂಡ ಮಲ್ಲಿಕಾರ್ಜುನ ಡಿ ಗೋನಾಳ, ರವಿ ಯುವ ಮುಖಂಡರು ಉಪಸ್ಥಿತರಿದ್ದರು.

# ಗಣತಿಗೆ ತೆರಳುತ್ತಿದ್ದ ಮತ್ತೊಬ್ಬ ಶಿಕ್ಷಕಿ ಮೇಲೆ ನಾಯಿ ದಾಳಿ

**ಬೇಲೂರು,ಅ.8–** ಗಣತಿಗೆಂದು ಶಿಕ್ಷಕಿ ದ್ವಿಚಕ್ರ ವಾಹನದಲ್ಲಿ ತೆರಳುತ್ತಿದ್ದ ಸಂದರ್ಭ ನಾಯಿಯೊಂದು ಅಟ್ಟಾಡಿಸಿ ಕಚ್ಚಿದ್ದರಿಂದ ಬಿದ್ದು ಗಾಯಗೊಂಡಿರುವ ಘಟನೆ ತಾಲೂಕಿನ ಗೆಂಡೇಹಳ್ಳಿಯಲ್ಲಿ ತಡವಾಗಿ ಬೆಳಕಿಗೆ ಬಂದಿದ್ದು, ಹೆಚ್ಚಿನ ಚಿಕಿತ್ಸೆಗಾಗಿ ಹಾಸನ ಜಿಲ್ಲಾಸ್ಪತ್ರೆಗೆ ದಾಖಲಿಸಲಾಗಿದೆ.ಪಟ್ಟಣದಲ್ಲಿ ಮೂರು ದಿನಗಳ ಹಿಂದೆ ಮದ್ಯಾಹ್ನದ ಸಮಯದಲ್ಲಿ ಬೀದಿ ನಾಯಿ 6 ಜನರಿಗೆ ಕಚ್ಚಿ ಗಂಭಿರವಾಗಿ ಗಾಯಗೊಳಿಸಿದ್ದರಿಂದ ಎಲ್ಲ ಗಾಯಾಳುಗಳನ್ನು ಶಾಸಕ ಎಚ್.ಕೆ.ಸುರೇಶ್ ನೇತೃತ್ವದಲ್ಲಿ ಜಿಲ್ಲಾಸ್ಪತ್ರೆಗೆ ಕಳುಹಿಸಿ ಚಿಕಿತ್ಸೆಗೆ ದಾಖಲಿಸಲಾಗಿತ್ತು.



## ಕೊಪ್ಪಳ : ಕಾರಿನಿಂದ ಬೈಕ್‌ಗೆ ಡಿಕ್ಕಿ ಹೊಡೆಸಿ ಬಿಜೆಪಿ ಮುಖಂಡನ ಬರ್ಬರ ಹತ್ಯೆ



**ಕೊಪ್ಪಳ,ಅ.8–** ಕಾರಿನಿಂದ ಬೈಕ್‌ಗೆ ಡಿಕ್ಕಿ ಹೊಡೆಸಿ ನಡು ರಸ್ತೆಯಲ್ಲೆ ಬಿಜೆಪಿ ಯುವ ಮುಖಂಡನನ್ನುಮಾರಕಾಸ್ತ್ರಗಳಿಂದ ಬರ್ಬರವಾಗಿ ಹತ್ಯೆಮಾಡಿರುವ ಘಟನೆ ಗಂಗಾವತಿ ನಗರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಇಂದು ಬೆಳಗಿನ ಜಾವ ನಡೆದಿದೆ.

ಕೊಪ್ಪಳ ಜಿಲ್ಲೆಯ ಗಂಗಾವತಿ ಯುವ ಮೋರ್ಚಾ ಅಧ್ಯಕ್ಷ ವೆಂಕಟೇಶ್ (31) ಕೊಲೆಯಾದ ಮುಖಂಡ.ಇಂದು ಬೆಳಗಿನ ಜಾವ 2 ಗಂಟೆ ಸುಮಾರಿನಲ್ಲಿ ವೆಂಕಟೇಶ್ ಅವರು ಸ್ನೇಹಿತರೊಂದಿಗೆ ಊಟ ಮಾಡಿಕೊಂಡು ದೇವಿ ಕ್ಯಾಂಪ್‌ನಿಂದ ಗಂಗಾವತಿಗೆ ಬೈಕ್‌ನಲ್ಲಿ ಬರುತ್ತಿದ್ದಾಗ ಕಾರಿನಲ್ಲಿ ದುಷ್ಕರ್ಮಿಗಳು ಹಿಂಬಾಲಿಸಿದ್ದಾರೆ.

ಕೊಪ್ಪಳ ರಸ್ತೆಯ ಲೀಲಾವತಿ ಆಸ್ಪತ್ರೆ ಮುಂದೆಯೇ ವೆಂಕಟೇಶ್ ಬೈಕ್‌ಗೆ ಕಾರಿನಿಂದ ಡಿಕ್ಕಿ ಹೊಡೆಸಿ ಕಾರಿನಿಂದ ಆರೇಳು ಮಂದಿ ಮಾರಕಾಸ್ತ್ರಗಳೊಂದಿಗೆ ಹೊರ ಬಂದು ವೆಂಕಟೇಶ್ ಮೇಲೆ ಮನ ಬಂದಂತೆ ಹಲ್ಲೆ ನಡೆಸಿ ಬರ್ಬರವಾಗಿ ಕೊಲೆ ಮಾಡಿ ಪರಾರಿಯಾಗಿದ್ದಾರೆ. ಸುದ್ದಿ ತಿಳಿದು ಡಿವೈಎಸ್‌ಪಿ ಸಿದ್ದನಗೌಡ ಪಾಟೀಲ್ ಹಾಗೂ ಗಂಗಾವತಿ ನಗರ ಠಾಣೆ ಪೊಲೀಸರು ಸ್ಥಳಕ್ಕೆ ಆಗಮಿಸಿ ಪರಿಶೀಲಿಸಿದ್ದಾರೆ.ವೆಂಕಟೇಶ್ ಕೊಲೆಗೆ ನಿಖರ ಕಾರಣ ತಿಳಿದು ಬಂದಿಲ್ಲ. ಹಳೇ ವೈಷಮ್ಯವೇ ಕೊಲೆಗೆ ಕಾರಣವಾಗಿರಬಹುದೇ ಎಂಬ ಶಂಕೆ ವ್ಯಕ್ತವಾಗಿದೆ.ಗಂಗಾವತಿನಗರ ಠಾಣೆ ಪೊಲೀಸರು ವೆಂಕಟೇಶ್ ಮೃತದೇಹವನ್ನು ಆಸ್ಪತ್ರೆಗೆ ರವಾನಿಸಿದ್ದು, ಆಸ್ಪತ್ರೆ ಬಳಿ ಸಂಬಂಧಿಕರ ಆಕ್ರಂದನ ಮುಗಿಲು ಮುಟ್ಟಿತ್ತು.

ಈ ಬಗ್ಗೆ ಪ್ರಕರಣ ದಾಖಲಿಸಿಕೊಂಡಿರುವ ಗಂಗಾವತಿ ನಗರ ಠಾಣೆ ಪೊಲೀಸರು ದುಷ್ಕರ್ಮಿಗಳ ಪತ್ತೆಗಾಗಿ ಶೋಧ ಮುಂದುವರೆಸಿದ್ದಾರೆ.ಘಟನಾ ಸ್ಥಳದ ಸುತ್ತಮುತ್ತಲಿನ ರಸ್ತೆಗಳಲ್ಲಿರುವ ಸಿಸಿ ಕ್ಯಾಮೆರಾಗಳನ್ನು ಪರಿಶೀಲಿಸಿ ಆರೋಪಿಗಳ ಪತ್ತೆಗೆ ಬಲೆ ಬೀಸಿದ್ದಾರೆ.ಕಾರು ಪತ್ತೆ: ಈ ನಡುವೆ ದುಷ್ಕರ್ಮಿಗಳು ಕೊಲೆಗೆ ಬಳಸಿದ್ದ ಟಾಟಾ ಇಂಡಿಕಾ ಕಾರು ಗಂಗಾವತಿಯ ಹೆಚ್‌ಎಸ್‌ಆರ್ ಕಾಲೋನಿಯಲ್ಲಿ ಪತ್ತೆಯಾಗಿದ್ದು, ಪೊಲೀಸರು ಕಾರನ್ನು ವಶಕ್ಕೆ ಪಡೆದಿದ್ದಾರೆ.ಹಳೇ ದ್ವೇಷ ಶಂಕೆ:ವೆಂಕಟೇಶ್ ಕೊಲೆ ಹಿಂದೆ ಹಳೇ ದ್ವೇಷವಿರುವ ಶಂಕೆ ವ್ಯಕ್ತವಾಗಿದೆ. ವೆಂಕಟೇಶ್ ಸ್ನೇಹಿತರು ರವಿ ಎಂಬಾತನ ಮೇಲೆ ಅನುಮಾನ ವ್ಯಕ್ತಪಡಿಸಿದ್ದಾರೆ. ವೆಂಕಟೇಶ್ ಹಾಗೂ ರವಿ ಮಧ್ಯೆ ಕಳೆದ ಏಳೆಂಟು ವರ್ಷಗಳಿಂದ ದ್ವೇಷವಿದ್ದು, ನಾಯಕತ್ವದ ವಿಚಾರದಲ್ಲಿ ಇಬ್ಬರ ನಡುವೆ ವೈಷಮ್ಯ ಮೂಡಿತ್ತು ಎಂದು ಹೇಳಲಾಗುತ್ತಿದೆ.

ಏರಿಯಾ ಕಂಟ್ರೋಲ್ ವಿಚಾರಕ್ಕೂ ಈ ಇಬ್ಬರ ನಡುವೆ ಭಿನ್ನಾಭಿಪ್ರಾಯವಿತ್ತು ಎಂಬ ಮಾತು ಕೇಳಿಬರುತ್ತಿದೆ.ಒಟ್ಟಾರೆ ಬಿಜೆಪಿ ಯುವ ಮುಖಂಡನ ಬರ್ಬರ ಹತ್ಯೆ ಗಂಗಾವತಿ ನಗರದ ಜನತೆಯನ್ನು ಬೆಚ್ಚಿ ಬೀಳುವಂತೆ ಮಾಡಿದೆ.

## ವಾಯುಪಡೆ ದಿನ : ಮುರ್ಮು, ಮೋದಿ ಶುಭಾಶಯ



**ನವದೆಹಲಿ,ಅ.8–** ಇಂದು ಆಚರಿಸಲಾಗುತ್ತಿರುವ 93ನೇ ಭಾರತೀಯ ವಾಯುಪಡೆ ದಿನದ ಸಂದರ್ಭದಲ್ಲಿ ರಾಷ್ಟ್ರಪತಿ ದ್ರೌಪದಿ ಮುರ್ಮು, ಉಪಾಧ್ಯಕ್ಷ ಸಿ.ಪಿ. ರಾಧಾಕೃಷ್ಣನ್, ಪ್ರಧಾನಿ ಮೋದಿ ಮತ್ತು ಗೃಹ ಸಚಿವ ಅಮಿತ್ ಶಾ ಸೇರಿದಂತೆ ಅನೇಕ ಗಣ್ಯರು ಈ ಸಂದರ್ಭದಲ್ಲಿ ಭಾರತೀಯ ವಾಯುಪಡೆಗೆ ಹೃತ್ಪೂರ್ವಕ ಶುಭಾಶಯಗಳನ್ನು ತಿಳಿಸಿದ್ದಾರೆ.

ಬುಧವಾರದಂದು ರಾಷ್ಟ್ರಪತಿಗಳು ತಮ್ಮ ಸಂದೇಶದಲ್ಲಿ, ವಾಯುಪಡೆಯು ತನ್ನ ಶಕ್ತಿ ಮತ್ತು ಪ್ರತಿಯೊಂದು ಸವಾಲನ್ನು ಎದುರಿಸುವ ಸಿದ್ಧತೆಯಿಂದ ದೇಶವನ್ನು ಹೆಮ್ಮೆಪಡುವಂತೆ ಮಾಡಿದೆ ಎಂದು ಹೇಳಿದ್ದಾರೆ. ವಾಯುಪಡೆ ದಿನದಂದು ಎಲ್ಲಾ ವಾಯು ಯೋಧರು, ಮಾಜಿ ಸೈನಿಕರು ಮತ್ತು ಅವರ ಕುಟುಂಬಗಳಿಗೆ ಹೃತ್ಪೂರ್ವಕ ಶುಭಾಶಯಗಳು! ಭಾರತೀಯ ವಾಯುಪಡೆಯು ಯಾವಾಗಲೂ ಧೈರ್ಯ, ಬದ್ಧತೆ ಮತ್ತು ಶ್ರೇಷ್ಠತೆಯನ್ನು ಪ್ರದರ್ಶಿಸಿದೆ. ನಮ್ಮ ವಾಯು ಯೋಧರು ನಮ್ಮ ಆಕಾಶವನ್ನು ರಕ್ಷಿಸುತ್ತಾರೆ ಮತ್ತು ವಿಪತ್ತುಗಳು ಮತ್ತು ಮಾನವೀಯ ಕಾರ್ಯಾಚರಣೆಗಳ ಸಮಯದಲ್ಲಿ ದಣಿವರಿಯದ ಸಮರ್ಪಣೆಯೊಂದಿಗೆ ರಾಷ್ಟ್ರಕ್ಕೆ ಸೇವೆ ಸಲ್ಲಿಸುತ್ತಾರೆ. ನಮ್ಮ ವಾಯುಪಡೆಯು ತನ್ನ ಶಕ್ತಿ ಮತ್ತು ಪ್ರತಿಯೊಂದು ಸವಾಲನ್ನು ಎದುರಿಸುವ ಸಿದ್ಧತೆಯಿಂದ ರಾಷ್ಟ್ರವನ್ನು ಹೆಮ್ಮೆಪಡುವಂತೆ ಮಾಡಿದೆ. ಭಾರತೀಯ ವಾಯುಪಡೆಯು ತನ್ನ ಭವಿಷ್ಯದ ಎಲ್ಲಾ ಪ್ರಯತ್ನಗಳಲ್ಲಿ ಯಶಸ್ಸನ್ನು ಬಯಸುತ್ತೇನೆ ಎಂದು ಶುಭ ಹಾರೈಸಿದ್ದಾರೆ.

ವಾಯುಪಡೆ ದಿನದಂದು ಎಲ್ಲಾ ಧೈರ್ಯಶಾಲಿ ವಾಯು ಯೋಧರು ಮತ್ತು ಅವರ ಕುಟುಂಬಗಳಿಗೆ ಹೃತ್ಪೂರ್ವಕ ಶುಭಾಶಯಗಳು. ಭಾರತೀಯ ವಾಯುಪಡೆಯು ಶೌರ್ಯ, ಶಿಸ್ತು ಮತ್ತು ನಿಖರತೆಯ ಸಂಕೇತವಾಗಿದೆ. ಅತ್ಯಂತ ಸವಾಲಿನ ಸಂದರ್ಭಗಳಲ್ಲಿಯೂ ಸಹ ಅವರು ನಮ್ಮ ಆಕಾಶವನ್ನು ರಕ್ಷಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆ. ನೈಸರ್ಗಿಕ ವಿಕೋಪಗಳ ಸಮಯದಲ್ಲಿ ಅವರ ಪಾತ್ರವು ಅತ್ಯಂತ ಶ್ಲಾಘನೀಯವಾಗಿದೆ. ಪ್ರತಿಯೊಬ್ಬ ಭಾರತೀಯನು ಅವರ ಬದ್ಧತೆ, ವೃತ್ತಿಪರತೆ ಮತ್ತು ಅದಮ್ಯ ಧೈರ್ಯದ ಬಗ್ಗೆ ಹೆಮ್ಮೆಪಡುತ್ತಾನೆ. ಎಂದು ಪ್ರಧಾನಿ ಮೋದಿ ಹೇಳಿದ್ದಾರೆ.ಭಾರತೀಯ ವಾಯುಪಡೆಯ ದಿನದಂದು ನಮ್ಮ ಆಕಾಶ ರಕ್ಷಕರಿಗೆ ಹೃತ್ಪೂರ್ವಕ ಶುಭಾಶಯಗಳು. ಈ ಪಡೆಯ ಹೆಸರೇ ಭಾರತೀಯರ ಹೃದಯದಲ್ಲಿ ಅಪಾರ ಹೆಮ್ಮೆಯನ್ನು ಪ್ರೇರೇಪಿಸುತ್ತದೆ. ರಾಷ್ಟ್ರೀಯ ಭದ್ರತೆಯ ಹೊರೆಯನ್ನು ಹೊರುವುದಾಗಲಿ ಅಥವಾ ನೈಸರ್ಗಿಕ ವಿಕೋಪಗಳ ಸಮಯದಲ್ಲಿ ಜೀವಗಳನ್ನು ಉಳಿಸುವುದಾಗಲಿ, ಭಾರತೀಯ ವಾಯುಪಡೆಯು ಯಾವಾಗಲೂ ತನ್ನ ಅದಮ್ಯ ಧೈರ್ಯ ಮತ್ತು ಅಚಲ ದೇಶಭಕ್ತಿಯಿಂದ ಎದ್ದು ನಿಲ್ಲುತ್ತದೆ. ಈ ದಿನದಂದು, ರಾಷ್ಟ್ರಕ್ಕಾಗಿ ಸರ್ವೋಚ್ಚ ತ್ಯಾಗ ಮಾಡಿದ ಈ ಪಡೆಯ ಹುತಾತ್ಮರಿಗೆ ನಾನು ನನ್ನ ಹೃತ್ಪೂರ್ವಕ ಗೌರವ ಸಲ್ಲಿಸುತ್ತೇನೆ ಎಂದು ಅಮಿತ್ ಶಾ ತಮ್ಮ ಸಂದೇಶದಲ್ಲಿ ತಿಳಿಸಿದ್ದಾರೆ.

# ಭಾರತಕ್ಕೆ ಬಂದ ಬ್ರಿಟಿಷ್ ಪ್ರಧಾನಿ ಸ್ಟಾರ್ಮರ್, ವಿಸ್ಕಿ ಉದ್ಯಮದಲ್ಲಿ ಸಂಚಲನ




**ಲಂಡನ್,ಅ. 8 (ಪಿಟಿಐ)–** ಬ್ರಿಟಿಷ್ ಪ್ರಧಾನಿ ಕೀರ್ ಸ್ಟಾರ್ಮರ್ ಇಂದು ಭಾರತಕ್ಕೆ ಭೇಟಿ ನೀಡಿದ್ದಾರೆ.ಎರಡು ದಿನಗಳ ಅವರ ಭೇಟಿ ಸಂದರ್ಭದಲ್ಲಿ ಸ್ಕಾಚ್ ವಿಸ್ಕಿ ಉದ್ಯಮವು ಭಾರತ–ಯುಕೆ ಮುಕ್ತ ವ್ಯಾಪಾರ ಒಪ್ಪಂದದ (ಎಫ್‌ಟಿಎ) ದೊಡ್ಡ ವಿಜೇತ ಎಂದು ಗಮನ ಸೆಳೆಯುತ್ತಿದೆ, ಇದು ಯುಕೆ ಸರ್ಕಾರವು ಸ್ಕಾಟಿಷ್ ಆರ್ಥಿಕತೆಯನ್ನು ವರ್ಷಕ್ಕೆ 190 ಮಿಲಿಯನ್ ಪೌಂಡ್‌ಗಳಷ್ಟು ಹೆಚ್ಚಿಸುತ್ತದೆ ಎಂದು ನಿರೀಕ್ಷಿಸಲಾಗಿದೆ.

ಸ್ಕಾಚ್ ವಿಸ್ಕಿ ಅಸೋಸಿಯೇಷನ್ ಸದಸ್ಯರು ಮತ್ತು ಉತ್ಪಾದಕರು ಸ್ಟಾರ್ಮರ್‌ನ ವ್ಯಾಪಾರ ಕಾರ್ಯಾಚರಣೆಯ ಭಾಗವಾಗಿದ್ದಾರೆ ಎಂದು ಡೌನಿಂಗ್ ಸ್ಟ್ರಿ?ಟ್ ಹೇಳಿದೆ, ಇದು ವರ್ಷಕ್ಕೆ ಅಂದಾಜು 1 ಬಿಲಿಯನ್ ಪೌಂಡ್‌ಗಳಷ್ಟು ಮೌಲ್ಯದ ಭಾರತಕ್ಕೆ ವಿಸ್ಕಿ ಮಾರಾಟದಲ್ಲಿ ಸಂಭಾವ್ಯ ಹೆಚ್ಚಳವನ್ನು ನೇರವಾಗಿ ಅನ್ವೇಷಿಸುತ್ತದೆ, ಇದು 1,000 ಕ್ಕೂ ಹೆಚ್ಚು ಹೊಸ ಯುಕೆ ಉದ್ಯೋಗಗಳನ್ನು ಸೃಷ್ಟಿಸುತ್ತದೆ.

ಇಲ್ಲಿನ ಅಧಿಕಾರಿಗಳ ಪ್ರಕಾರ, ಯುಕೆ ಪ್ರಧಾನಿಯಾಗಿ ಸ್ಟಾರ್ಮರ್ ಅವರ ಮೊದಲ ಭಾರತೀಯ ಭೇಟಿಯು ಯುನೈಟೆಡ್ ಕಿಂಗ್‌ಡಮ್‌ನ ಎಲ್ಲಾ ಭಾಗಗಳಿಗೆ ಪ್ರಯೋಜನವನ್ನು ನೀಡುವ ದ್ವಿಪಕ್ಷೀಯ ವ್ಯಾಪಾರ ಮತ್ತು ರಾಜತಾಂತ್ರಿಕ ಸಂಬಂಧಗಳನ್ನು ಗಾಢವಾಗಿಸಲು ಭಾರತೀಯ ಸರ್ಕಾರದ ಹಿರಿಯ ಮಂತ್ರಿಗಳು ಮತ್ತು ವ್ಯವಹಾರಗಳೊಂದಿಗೆ ಪ್ರಮುಖ ಸಭೆಗಳನ್ನು ಒಳಗೊಂಡಿರುತ್ತದೆ.ಈ ವರ್ಷ ಭಾರತದೊಂದಿಗೆ ಯುಕೆ ಸರ್ಕಾರ ಮಾಡಿಕೊಂಡ ಐತಿಹಾಸಿಕ ವ್ಯಾಪಾರ ಒಪ್ಪಂದವು ಸ್ಕಾಟ್ಲೆಂಡ್‌ಗೆ ಮತ್ತು ವಿಶೇಷವಾಗಿ ನಮ್ಮ ವಿಸ್ಕಿ ಉದ್ಯಮಕ್ಕೆ ಉತ್ತಮ ಸುದ್ದಿಯಾಗಿದೆ; ಆದರೆ ಒಪ್ಪಂದವನ್ನು ಪಡೆದುಕೊಂಡ ನಂತರ, ಈ ಒಪ್ಪಂದವನ್ನು ಕಾರ್ಯರೂಪಕ್ಕೆ ತರುವುದು ಈಗ ನಮ್ಮ ಸವಾಲು ಮತ್ತು ಜವಾಬ್ದಾರಿಯಾಗಿದೆ ಎಂದು ಸ್ಕಾಟ್ಲೆಂಡ್‌ನ ಯುಕೆ ವಿದೇಶಾಂಗ ಕಾರ್ಯದರ್ಶಿ ಡೌಗ್ಲಾಸ್ ಅಲೆಕ್ಸಾಂಡರ್ ಹೇಳಿದರು.

ಈ ವ್ಯಾಪಾರ ಕಾರ್ಯಾಚರಣೆಯನ್ನು ಮುನ್ನಡೆಸುತ್ತಾ, ಪ್ರಧಾನ ಮಂತ್ರಿಯವರು ಸ್ಕಾಟ್ಲೆಂಡ್‌ನ ಅತ್ಯುತ್ತಮ ಉತ್ಪನ್ನಗಳಿಗೆ ಡ್ರಮ್ ಬಾರಿಸಲಿದ್ದಾರೆ. ಯುಕೆ ಸರ್ಕಾರದ ಶಕ್ತಿ ಮತ್ತು ಬೆಂಬಲದೊಂದಿಗೆ, ಅವು ರಫ್ತು ಮಾರುಕಟ್ಟೆಗಳ ವಿಷಯದಲ್ಲಿ ವಿಶ್ವವ್ಯಾಪಿಯಾಗಬಹುದು ಎಂದು ಸಚಿವರು ಹೇಳಿದರು.ಭಾರತ–ಯುಕೆ ಸಮಗ್ರ ಆರ್ಥಿಕ ಮತ್ತು ವ್ಯಾಪಾರ ಒಪ್ಪಂದ ಎಂದು ಕರೆಯಲ್ಪಡುವ ಮುಂದಿನ ವರ್ಷ ಬ್ರಿಟಿಷ್ ಸಂಸತ್ತಿನ ಅನುಮೋದನೆ ಪ್ರಕ್ರಿಯೆಯನ್ನು ಪೂರ್ಣಗೊಳಿಸಿದ ನಂತರ ಭಾರತೀಯ ಆಮದು ಸುಂಕಗಳನ್ನು ಗಣನೀಯವಾಗಿ ಕಡಿತಗೊಳಿಸುವುದನ್ನು ನೋಡುವ ಉತ್ಪನ್ನಗಳಲ್ಲಿ ಸ್ಕಾಚ್ ವಿಸ್ಕಿಯೂ ಒಂದು.

ನಮ್ಮ ಎಲ್ಲಾ ರಫ್ತುಗಳ ಮೇಲೆ ಉದಾರೀಕೃತ ಸುಂಕಗಳನ್ನು ಭಾರತಕ್ಕೆ ತಲುಪಿಸುವುದರಿಂದ ಮುಂಬರುವ ವರ್ಷಗಳಲ್ಲಿ ವಿಶ್ವದ ಅತಿದೊಡ್ಡ ವಿಸ್ಕಿ ಮಾರುಕಟ್ಟೆಗೆ ಪ್ರವೇಶವನ್ನು ತೆರೆಯುತ್ತದೆ ಮತ್ತು ಭಾರತೀಯ ಗ್ರಾಹಕರಿಗೆ ಹೆಚ್ಚಿನ ಆಯ್ಕೆಯನ್ನು ನೀಡುತ್ತದೆ ಎಂದು ಸ್ಕಾಚ್ ವಿಸ್ಕಿ ಅಸೋಸಿಯೇಷನ್‌ನ ಮುಖ್ಯ ಕಾರ್ಯನಿರ್ವಾಹಕ ಮಾರ್ಕ್ ಕೆಂಟ್ ಹೇಳಿದರು.

ಈ ಒಪ್ಪಂದವು ಸರ್ಕಾರವು ದೀರ್ಘಾವಧಿಯ ಕಾರ್ಯತಂತ್ರದ ಅವಕಾಶಗಳನ್ನು ಒದಗಿಸಲು ಉದ್ಯಮದೊಂದಿಗೆ ನಿಕಟವಾಗಿ ಕೆಲಸ ಮಾಡುವುದಕ್ಕೆ ಉತ್ತಮ ಉದಾಹರಣೆಯಾಗಿದೆ, ಏಕೆಂದರೆ ಉದ್ಯಮವು ಎದುರಿಸುತ್ತಿರುವ ತಕ್ಷಣದ ಬಲವಾದ ಅಡೆತಡೆಗಳನ್ನು ಎದುರಿಸಲು ನಮಗೆ ಸಹಾಯ ಮಾಡಲು ಸರ್ಕಾರದೊಂದಿಗೆ ಕೆಲಸ ಮಾಡಲು ನಾವು ಇದೇ ರೀತಿ ಆಶಿಸುತ್ತೇವೆ ಎಂದು ಅವರು ಹೇಳಿದರು.ಜುಲೈನಲ್ಲಿ ಪ್ರಧಾನಿ ನರೇಂದ್ರ ಮೋದಿಯವರ ಯುಕೆ ಭೇಟಿಯ ಸಂದರ್ಭದಲ್ಲಿ ತಲುಪಿದ ಹೆಗ್ಗುರುತು ಸಿಇಟಿಎ ಒಪ್ಪಂದದ ಪ್ರಯೋಜನಗಳು ದೇಶದ ಎಲ್ಲಾ ಭಾಗಗಳಲ್ಲಿ ಆರ್ಥಿಕ ಬೆಳವಣಿಗೆಯನ್ನು ಉತ್ತೇಜಿಸುತ್ತದೆ, ಶಾರ್ಟ್‌ಬ್ರೆಡ್ ಮತ್ತು ಜನಪ್ರಿಯ ಫಿಜ್ಜಿ ಪಾನೀಯ ಇರ್ನ್ ಬ್ರೂನಂತಹ ಇತರ ಐಕಾನಿಕ್ ಸ್ಕಾಟಿಷ್ ಉತ್ಪನ್ನಗಳಿಗೆ ರಫ್ತು ಅವಕಾಶಗಳನ್ನು ಹೆಚ್ಚಿಸುತ್ತದೆ ಎಂಬುದನ್ನು ಯುಕೆ ಸರ್ಕಾರ ಎತ್ತಿ ತೋರಿಸುತ್ತದೆ.

ಭಾರತದೊಂದಿಗಿನ ಈ ಒಪ್ಪಂದವು ದೀರ್ಘಾವಧಿಯಲ್ಲಿ ಉದ್ಯಮಕ್ಕೆ ಪರಿವರ್ತನೆ ತರಬಹುದು. ಈ ವ್ಯಾಪಾರ ಕಾರ್ಯಾಚರಣೆಯಲ್ಲಿ, ಈ ನಿರ್ಣಾಯಕ ವ್ಯಾಪಾರ ಒಪ್ಪಂದವು ಸ್ಕಾಟ್ಲೆಂಡ್‌ಗೆ ತರುವ ಅವಕಾಶಗಳ ಸಂಪೂರ್ಣ ಲಾಭವನ್ನು ಪಡೆಯಲು ನಾವು ನೋಡುತ್ತೇವೆ ಎಂದು ಎರಡು ತಿಂಗಳ ಹಿಂದೆ ಎಫ್‌ಟಿಎ ಅಂತಿಮಗೊಳಿಸಿದಾಗ ವ್ಯಾಪಾರ ಸಚಿವರಾಗಿದ್ದ ಡೌಗ್ಲಾಸ್ ಅಲೆಕ್ಸಾಂಡರ್ ಹೇಳಿದರು.

## ಸಿಜೆಐ ಮೇಲೆ ಶೂ ಎಸೆಯುವ ಯತ್ನ ಖಂಡಿಸಿ ಕಾಂಗ್ರೆಸ್ ಪ್ರತಿಭಟನೆ



**ಬೆಂಗಳೂರು, ಅ.8–** ಸುಪ್ರಿಂಕೋರ್ಟ್ ಮುಖ್ಯ ನ್ಯಾಯಮೂರ್ತಿ ಗವಾಯಿ ಅವರ ಮೇಲೆ ಶೂ ಎಸೆದ ಆರೋಪಿಯನ್ನು ಬಂಧಿಸಿ, ಕಠಿಣ ಕಾನೂನು ಕ್ರಮ ಕೈಗೊಂಡು, ಗಡೀಪಾರು ಮಾಡಬೇಕೆಂದು ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಮನೋಹರ್ ನೇತೃತ್ವದಲ್ಲಿ ಪ್ರತಿಭಟನೆ ನಡೆಸಲಾಯಿತು.

ರಾಕೇಶ್‌ಕಿಶೋರ್ ಎಂಬ ವಕೀಲ ಸುಪ್ರಿಂಕೋರ್ಟ್ ಮುಖ್ಯ ನ್ಯಾಯಮೂರ್ತಿ ಗವಾಯಿ ಅವರು ಕುಳಿತಿದ್ದ ಪೀಠದತ್ತ ಶೂ ಎಸೆಯಲು ಯತ್ನಿಸಿರುವುದು ಪ್ರಜಾಪ್ರಭುತ್ವಕ್ಕೆ ಹಾಗೂ ನ್ಯಾಯಾಂಗ ವ್ಯವಸ್ಥೆಗೆ ಮಾಡಿರುವ ಅಪಚಾರವಾಗಿದೆ. ಇವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕೆಂದು ಮನೋಹರ್ ಆಗ್ರಹಿಸಿದರು.

ಇತಹ ಕೃತ್ಯವೆಸಗಿದ ವ್ಯಕ್ತಿಯನ್ನು ಬಂಧಿಸಿ, ಬಿಡುಗಡೆ ಮಾಡಿರುವುದು ಅತ್ಯಂತ ದುರದೃಷ್ಟಕರ ಸಂಗತಿ. ಈ ವ್ಯಕ್ತಿ ಮಾಡಿರುವ ಕೃತ್ಯ ದೇಶದ ಪ್ರತಿಯೊಬ್ಬರಿಗೂ ಮಾಡಿರುವ ಅವಮಾನವಾಗಿದೆ. ಈ ಕೃತ್ಯವನ್ನು ಖಂಡಿಸಲು ಕೇಂದ್ರ ಸರ್ಕಾರ ಮುಂದಾಗದಿರುವುದು ದುರದೃಷ್ಟಕರ ಘಟನೆ ಎಂದು ಕಿಡಿಕಾರಿದರು.

ಪ್ರಧಾನಿ ನರೇಂದ್ರ ಮೋದಿಯವರು ಈ ಘಟನೆಯನ್ನು ಖಂಡಿಸಿದ್ದಾರೆ. ಆದರೆ ಯಾವ ಬಿಜೆಪಿ ಮುಖಂಡರೂ ಈ ಘಟನೆಯನ್ನು ಖಂಡಿಸಿಲ್ಲ ಎಂದು ಹೇಳಿದರು.ಪ್ರತಿಭಟನೆಯಲ್ಲಿ ಕಾಂಗ್ರೆಸ್ ಮುಖಂಡರಾದ ಸುಧಾಕರರಾವ್, ಪ್ರಕಾಶ್, ಹೇಮರಾಜು, ಕುಶಾಲ್ ಅರವೇಗೌಡ, ಪುಟ್ಟರಾಜು, ಉಮೇಶ್, ನವೀನ್ ಸುಂಕದಕಟ್ಟೆ, ಚಿನ್ನಿ ಪ್ರಕಾಶ್, ಓಬಲೇಶ್, ಆನಂದ್, ಪ್ರವೀಣ್, ಪವನ್, ಅಜಯ್, ಕಾಂಗ್ರೆಸ್ ಕಾರ್ಯಕರ್ತರು ಭಾಗವಹಿಸಿದ್ದರು.

## ಗ್ರಾಪಂನಲ್ಲಿ ಮಹರ್ಷಿ ವಾಲ್ಮೀಕಿ ಜಯಂತಿ ಆಚರಣೆ




**ಸೇಡಂ, ಅ, 08–** ರಾಮಾಯಣದ ಮಹಾಕವಿ ಮಹರ್ಷಿ ವಾಲ್ಮೀಕಿ ಜಯಂತಿಯ ಅಂಗವಾಗಿ ತಾಲೂಕಿನ ಊಡಗಿ ಗ್ರಾಮ ಪಂಚಾಯಿತಿಯಲ್ಲಿ ಮಹರ್ಷಿ ವಾಲ್ಮೀಕಿ ರವರ ಭಾವಚಿತ್ರಕ್ಕೆ ಕೃಷಿಕ ಸಮಾಜದ ರಾಜ್ಯ ಪ್ರತಿನಿಧಿ ಬಸವರಾಜ ಪಾಟೀಲ್ ಊಡಗಿ ಅವರು ಪೂಜೆ ಮಾಡಿ ಪುಷ್ಪ ನಮನ ಸಲ್ಲಿಸಿ ಮಾತನಾಡಿದರು. ಈ ವೇಳೆಯಲ್ಲಿ ಗ್ರಾಮ ಪಂಚಾಯತ್ ಅಧ್ಯಕ್ಷರಾದ ಶ್ರೀಮತಿ ರೂಪಾ ಸತೀಶ್ ಭಾಂಜಿ, ಮಾಜಿ ಗ್ರಾಮ್ ಪಂಚಾಯತ್ ಅಧ್ಯಕ್ಷ ಹಣಮಂತ ಬೆನಕನಹಳ್ಳಿ, ಗ್ರಾಮ ಪಂಚಾಯತ್ ಸಿಬ್ಬಂದಿಗಳಾದ ನಂದಕುಮಾರ್ ಗೌನಳ್ಳಿ, ಮೌನೇಶ್ ಬಡಿಗೇರ್, ಹಾಗೂ ಶೇಕ್ ಹುಸೇನ್ ಕುರೇಶಿ, ಸುಬ್ಬಣ್ಣ ಜಮಾದಾರ್, ಉಮೇಶ್ ಕಾಶಪ್ಪ, ಧರ್ಮಣ್ಣ ಈಶಪ್ಪ ನಾಯ್ಕೋಡಿ ಸಿದ್ದರಾಮ್ ಜಮಾದಾರ್, ಸಿದ್ದು ಜಮಾದಾರ್, ಮೈಬಣ್ಣ ಜಗ್ಗು, ನಾಗು ಜಮಾದಾರ್, ಧರ್ಮಣ್ಣ, ಮಹೇಶ್ ನಾಯಕ್ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

## ಜಾಲಿವುಡ್ ಸ್ಟುಡಿಯೋ: ತಪ್ಪು ಸರಿಪಡಿಸಿಕೊಳ್ಳಲು ಅವಕಾಶ



**ಬೆಂಗಳೂರು ಅ.8–**ಜಾಲಿವುಡ್ ಸ್ಟುಡಿಯೋ; ತಪ್ಪುಗಳನ್ನು ಪರಿಹರಿಸಿಕೊಳ್ಳಲು ಅವಕಾಶ ನೀಡುವಂತೆ ಸೂಚನೆ ನೀಡಿದ್ದೇನೆ ಎಂದು ಉಪಮುಖ್ಯಮಂತ್ರಿ ಡಿಕೆ ಶಿವಕುಮಾರ್ ಹೇಳಿದರು.

ಸದಾಶಿವನಗರದ ತಮ್ಮ ನಿವಾಸದ ಬಳಿ ಇಂದು ಸುದ್ದಿಗಾರರೊಂದಿಗೆ ಮಾತನಾಡಿದ ಅವರು "ಬಿಗ್ ಬಾಸ್ ಕಾರ್ಯಕ್ರಮ ನಡೆಯುವ ಜಾಲಿವುಡ್ ಸ್ಟುಡಿಯೋವನ್ನು ಉದ್ಘಾಟನೆ ಮಾಡಿದ್ದೇನಾನು. ಅಲ್ಲಿ ಏನಾಗಿದೆ ಎಂಬ ಬಗ್ಗೆ ಜಿಲ್ಲಾಧಿಕಾರಿಯಿಂದ ಮಾಹಿತಿ ಪಡೆದಿದ್ದೇನೆ. ಜೊತೆಗೆ ಉದ್ಯೋಗ ಮುಖ್ಯ ಎಂದೂ ಹೇಳಿದ್ದೇನೆ. ಖಾಸಗಿಯವರು ಹೂಡಿಕೆ ಮಾಡಿರುತ್ತಾರೆ. ಇದಕ್ಕೆ ಏನು ಪರಿಹಾರ ಕಂಡುಕೊಳ್ಳಬಹುದೋ ಅದಕ್ಕೆ ಅವಕಾಶ ನೀಡಿ ಎಂದೂ ತಿಳಿಸಿದ್ದೇನೆ. ಬಿಗ್ ಬಾಸ್ ಒಂದೇ ಅಲ್ಲ. ಎಲ್ಲಾ ಮನರಂಜನಾ ಕಾರ್ಯಕ್ರಮಗಳು ನಡೆಯಬೇಕು" ಎಂದರು.

"ಜಾಲಿವುಡ್ ಸ್ಟುಡಿಯೋದವರು ಮಾಲಿನ್ಯ ನಿಯಮಗಳನ್ನು ಪಾಲಿಸಿಲ್ಲ ಎಂದು ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ನೋಟಿಸ್ ನೀಡಲಾಗಿತ್ತು. ಅದರ ಆದೇಶದಂತೆ ಈಗ ಕ್ರಮ ತೆಗೆದುಕೊಳ್ಳಲಾಗಿದೆ. ಅಧಿಕಾರಿಗಳು ಕಾನೂನಾತ್ಮಕವಾಗಿ ಕೆಲಸ ಮಾಡಿದ್ದಾರೆ. ಈ ವಿಚಾರಗಳನ್ನು ನಾನು ಮಾಧ್ಯಮಗಳ ಮೂಲಕ ತಿಳಿದುಕೊಂಡೆ" ಎಂದು ಹೇಳಿದರು.

ನಟ್ಟು ಬೋಲ್ಟ್ ಟೈಟ್ ಎಂದು ಜೆಡಿಎಸ್ ಹಾಗೂ ಕುಮಾರಸ್ವಾಮಿ ಅವರು ಎಕ್ಸ್ (ಟ್ವೀಟ್) ಮಾಡಿರುವ ಬಗ್ಗೆ ಕೇಳಿದಾಗ, "ಅವರು ಏನು ಬೇಕಾದರೂ ಮಾಡಿಕೊಳ್ಳಲಿ. ಕುಮಾರಸ್ವಾಮಿ ಅವರಾದರೂ ಮಾಡಿಕೊಳ್ಳಲಿ, ಮೇಲಿನಿಂದ ಯಾರನ್ನಾದರೂ ಕರೆದುಕೊಂಡಾದರೂ ಬಂದು ಮಾಡಿಕೊಳ್ಳಲಿ" ಎಂದು ವ್ಯಂಗ್ಯವಾಡಿದರು."ಈ ವಿಚಾರದಲ್ಲಿ ಜೆಡಿಎಸ್ ಹಾಗೂ ಕುಮಾರಸ್ವಾಮಿ ಅವರು ರಾಜಕೀಯ ಮಾಡುತ್ತಿದ್ದಾರೆ. ಪ್ರತಿದಿನ ನನ್ನನ್ನು, ನನ್ನ ಹೆಸರನ್ನು ನೆನಪಿಸಿಕೊಳ್ಳದಿದ್ದರೆ ಕುಮಾರಸ್ವಾಮಿ ಅವರಿಗೆ ನೆಮ್ಮದಿ, ನಿದ್ದೆ ಹಾಗೂ ಯಾವುದಕ್ಕೂ ಶಕ್ತಿ ಬರುವುದಿಲ್ಲ" ಎಂದು ಲೇವಡಿ ಮಾಡಿದರು.

# ಜಿಲ್ಲಾಡಳಿತದಿಂದ ಬಿಗ್ ಬಾಸ್‌ಗೆ ರಿಲೀಫ್



**ಬೆಂಗಳೂರು, ಅ. 8–** ಬಿಗ್ ಬಾಸ್ ಮನೆಗೆ ಬೆಂಗಳೂರು ದಕ್ಷಿಣ ಜಿಲ್ಲಾ ಆಡಳಿತದಿಂದ ರಿಲೀಫ್ ಸಿಕ್ಕಿದೆ.ಈ ಹಿನ್ನೆಲೆಯಲ್ಲಿ 'ಬಿಗ್ ಬಾಸ್' ಶೋ ಪುನರಾರಂಭವಾಗುವ ಸಾಧ್ಯತೆ ಇದೆ.

ಪರಿಸರ ನಿಯಮ ಉಲ್ಲಂಘನೆ ಹಾಗೂ ಪೊಲೀಸ್ ಇಲಾಖೆಯಿಂದ ಅನುಮತಿ ಪಡೆಯದೆ ಕನ್ನಡ ಬಿಗ್ ಬಾಸ್ ಆರಂಭಿಸಿದ ಹಿನ್ನೆಲೆಯಲ್ಲಿ ನಿನ್ನೆ ಕಂದಾಯ ಅಧಿಕಾರಿಗಳು ಹಾಗೂ ಪೊಲೀಸರ ಸಮ್ಮುಖದಲ್ಲಿ ಬೆಂಗಳೂರು ದಕ್ಷಿಣ ತಹಶೀಲ್ದಾರ್ ತೇಜಸ್ವಿನಿ ಜಾಲಿವುಡ್ ಸ್ಟುಡಿಯೋಗೆ ಬೀಗ ಜಡಿದಿದ್ದರು.ಇದೀಗ ವೆಲ್ಸ್ ಸ್ಟುಡಿಯೋಸ್ ರವರು 15 ದಿನಗಳ ಕಾಲ ಅವಕಾಶ ನೀಡಿ ಎಂದು ಜಿಲ್ಲಾಧಿಕಾರಿಗೆ ಪತ್ರ ಬರೆದು ಮನವಿ ಮಾಡಿಕೊಂಡಿದ್ದರು. ಹಾಗಾಗಿ ಬಿಗ್ ಬಾಸ್ ಶೋಗೆ 10 ದಿನಗಳ ಕಾಲ ರಿಲೀಫ್ ಸಿಕ್ಕಿದ್ದು, ಜಿಲ್ಲಾಡಳಿತ 10 ದಿನಗಳ ಕಾಲಾವಕಾಶ ನೀಡಿದೆ. ಯಾವ ನಿಮ್ಮ ಪಾಲನೆ ಆಗಿಲ್ಲ ಅದೆಲ್ಲವನ್ನು ಸರಿಪಡಿಸುತ್ತೇವೆ ಎಂದು ವೆಲ್ಸ್ ಸ್ಟುಡಿಯೋಸ್ ಡಿಸಿಗೆ ಪತ್ರ ಬರೆದು ಮನವಿ ಮಾಡಿದ್ದು ಹಾಗಾಗಿ ಜಿಲ್ಲಾಡಳಿತ 10 ದಿನಗಳ ಕಾಲ ಅವಕಾಶ ನೀಡಿದೆ ಎನ್ನಲಾಗಿದ್ದು, ಈಗಾಗಲೇ ಬಿಡದಿ ಬೆಳೆಯುವ ಈಗಲ್ಟನ್ ರೆಸಾರ್ಟ್ ನಲ್ಲಿ ಇರುವ ಬಿಗ್ ಬಾಸ್ ಸ್ಪರ್ಧಿಗಳು ತಂಗಿದ್ದು, ಮಧ್ಯಾಹ್ನ 2 ಗಂಟೆಯೊಳಗೆ ರಿಲೀಫ್ ನೀಡುವ ಸಾಧ್ಯತೆ ಇದೆ ಎಂದು ಹೇಳಲಾಗುತ್ತಿದೆ.

**ಹೈಕೋರ್ಟ್ ಮೆಟ್ಟಿಲೇರಿದ್ದ ಬಿಗ್ ಬಾಸ್:** ಬಿಗ್ ಬಾಸ್ ಮನೆಗೆ ಬೀಗ ಹಾಕಿದ್ದನ್ನು ಪ್ರಶ್ನಿಸಿ ಇಂದು ಹೈಕೋರ್ಟಿಗೆ ಕಾರ್ಯಕ್ರಮದ ಆಯೋಜಕರು ರಿಟ್ ಅರ್ಜಿ ಸಲ್ಲಿಸಿದ್ದಾರೆ.ಪರಿಸರ ನಿಯಮ ಉಲ್ಲಂಘನೆ ಸೇರಿದಂತೆ ಪೊಲೀಸ್ ಇಲಾಖೆಯ ಅನುಮತಿ ಪಡೆಯದೆ ಕನ್ನಡ ಬಿಗ್ ಬಾಸ್ ಸೀಸನ್ 12 ಶೋ ನಡೆಸುತ್ತಿರುವ ಸಂಬಂಧ ನಿನ್ನೆ ರಾಮನಗರ ತಹಶೀಲ್ದಾರ್ ಬಿಗ್ ಬಾಸ್ ಮನೆಗೆ ಬೀಗ ಜಡಿದಿದ್ದರು.

ಈ ಸಂಬಂಧ ಜಾಲಿವುಡ್ ಸ್ಟುಡಿಯೋಸ್ ಕೋರ್ಟ್ ಮೆಟ್ಟಿಲೇರಿದೆ.ಇಂದೇ ತುರ್ತು ವಿಚಾರಣೆ ಮಾಡುವಂತೆ ಅರ್ಜಿದಾರರ ಪರವಾಗಿ ವಕೀಲರು ಮನವಿ ಮಾಡಿದ್ದಾರೆ ಹಾಗಾಗಿ ಮಧ್ಯಾಹ್ನ 2:30ರ ನಂತರ ಹೈಕೋರ್ಟ್ ಅಲ್ಲಿ ಅರ್ಜಿ ವಿಚಾರಣೆ ನಡೆಯಲಿದೆ. ಜಾಲಿವುಡ್ ಸ್ಟುಡಿಯೋದಿಂದ ರಿಟ್ ಅರ್ಜಿ ಸಲ್ಲಿಕೆಯಾಗಿದ್ದು, ನಿನ್ನೆ ಸಂಜೆ ಕಂದಾಯ ಅಧಿಕಾರಿಗಳು ಪೊಲೀಸರ ಸಮ್ಮುಖದಲ್ಲಿ ಬಿಗ್ ಬಾಸ್ ಮನೆಗೆ ಬೀಗ ಹಾಕಲಾಯಿತು ಬಳಿಕ ಒಂದು ಗಂಟೆಗಳ ಕಾಲ ಸ್ಪರ್ಧಿಗಳಿಗೆ ಮನೆಯಿಂದ ಹೊರಗಡೆ ಹೋಗಲು ಅವಕಾಶ ನೀಡಲಾಗಿತ್ತು. ಇದೀಗ ಈ ಒಂದು ಕ್ರಮವನ್ನು ಪ್ರಶ್ನಿಸಿ ಹೈಕೋರ್ಟ್ ಗೆ ಇಂದು ಜಾಲಿವುಡ್ ಸ್ಟುಡಿಯೋಸ್ ರಿಟ್ ಅರ್ಜಿ ಸಲ್ಲಿಸಿದೆ.

ಇನ್ನು ಅರ್ಜಿಯಲ್ಲಿ ಬಿಗ್ ಬಾಸ್ ಕಾರ್ಯಕ್ರಮ ಶುರುವಾಗುವ ಸಮಯದಲ್ಲಿ ಆದೇಶ ಹೊರಡಿಸಲಾಗಿದೆ. ತಮ್ಮ ಅಹವಾಲು ಆಲಿಸದೆ ತರಾತುರಿಯಲ್ಲಿ ಆದೇಶ ಹೊರಡಿಸಿದ್ದಾರೆ. ಮಾಲಿನ ನಿಯಂತ್ರಣ ಮಂಡಳಿ ಅಧ್ಯಕ್ಷರು ಆದೇಶ ಹೊರಡಿಸಿದ್ದಾರೆ. ಅರ್ಜಿದಾರರ ವ್ಯವಹಾರಕ್ಕೆ ಹಾನಿ ಮಾಡುವ ಉದ್ದೇಶವಿದೆ ಎಂದು ಅರ್ಜಿಯಲ್ಲಿ ವೆಲ್ಸ್ ಸ್ಟುಡಿಯೋ ಆರೋಪಿಸಿದೆ.

ಅರಮನೆ ತಾತ್ಕಾಲಿಕ ಅನಾಥ: ಬಿಗ್‌ಬಾಸ್ ದಿಢೀರ್ ಸ್ಥಗಿತದಿಂದ ಸ್ಪರ್ಧಿಗಳು, ತಂತ್ರಜ್ಞರು ಸೇರಿದಂತೆ 700 ಕ್ಕೂ ಹೆಚ್ಚು ಜನರು ಮನೆಗೆ ವಾಪಸ್ ಆಗುವಂತಾಗಿದೆ. ಆರು ತಿಂಗಳ ಕಾಲ ಮೂರು ಶಿಫ್ಟ್‌ನಲ್ಲಿ ತಂತ್ರಜ್ಞರು ಕೆಲಸ ಮಾಡುತ್ತಿದ್ದರು. ಐದು ಕೋಟಿಗೂ ಅಧಿಕ ವೆಚ್ಚದಲ್ಲಿ ಬಿಗ್ ಬಾಸ್ ಮನೆ ನಿರ್ಮಾಣವಾಗಿತ್ತು. ಈಗ ತಾತ್ಕಾಲಿಕವಾಗಿ ಅನಾಥವಾಗಲಿದೆ. ಅರಮನೆ ವಿನ್ಯಾಸದಲ್ಲಿ ಬಿಗ್ ಬಾಸ್ ಮನೆಯನ್ನು ನಿರ್ಮಿಸಲಾಗಿತ್ತು. ಕಿಚ್ಚ ಸುದೀಪ್ ಆಶಯದಂತೆ ಇದೇ ಮೊದಲ ಬಾರಿಗೆ ಅದ್ದೂರಿಯಾಗಿ ಮನೆ ನಿರ್ಮಾಣಗೊಂಡಿತ್ತು.

**ಬಿಗ್ ಬಾಸ್ ಗೆ ಬೆಸ್ಕಾಂನಿದಲೂ ಸಂಕಷ್ಟ..!?**

ಬಿಗ್ ಬಾಸ್ ಮನೆಗೆ ಬೀಗ ಜಡಿದಿರುವ ಬೆನ್ನಲ್ಲೆ ಇದೀಗ ಬಿಗ್ ಬಾಸ್ ಗೆ ಮತ್ತೊಂದು ಸಂಕಷ್ಟ ಎದುರಾಗಿದೆ. ವಿದ್ಯುತ್ ಕಡಿತ ಮಾಡುವ ಕುರಿತು ಬೆಸ್ಕಾಂ ಬಿಗ್ ಬಾಸ್ ಮನೆಗೆ ನೋಟಿಸ್ ನೀಡಲು ಮುಂದಾಗಿದ್ದಾರೆ. ವೆಲ್ ಸ್ಟುಡಿಯೋಗೆ ನೋಟಿಸ್ ನೀಡಲು ಇದೀಗ ಬೆಸ್ಕಾಂ ಮುಂದಾಗಿದೆ. ವಿದ್ಯುತ್ ಸಂಪರ್ಕ ಕಡಿತಗೊಳಿಸುವ ಸಂಬಂಧ ನೀಡಲು ಮುಂದಾಗಿದೆ . ವೆಲ್ತ್ ಸ್ಟುಡಿಯೋಸ್ ಬಳಿಗೆ ಬೆಸ್ಕಾಂ ಅಧಿಕಾರಿಗಳು ನೋಟಿಸ್ ನೀಡಲು ಆಗಮಿಸಿದ್ದಾರೆ ಜಾಲಿವುಡ್ ಸ್ಟುಡಿಯೋ ಬಳಿ ಬಂದ ಬಿಡದಿ ಎಇಇ ಮೋಹಿತಾ ಆಗಮಿಸಿದ್ದು, ನೋಟಿಸ್ ಸ್ವೀಕರಿಸಲು ಯಾವುದೇ ಸಿಬ್ಬಂದಿ ಇಲ್ಲದ ಹಿನ್ನೆಲೆಯಲ್ಲಿ ಸ್ಟುಡಿಯೋದ ಗೇಟ್ ಸಿ ಬಳಿ ಬೆಸ್ಕಾಂ ಅಧಿಕಾರಿಗಳು ಕಾದರು.

ಯುವ ಮಾರ್ಗ

ಗುರುವಾರ: 09–10–2025

## ದೇವದಾಸಿ ಮಹಿಳೆಯರ ಕುಟುಂಬದ ಗಣತಿಯಲ್ಲಿನ ಅಸಮರ್ಪಕತೆ ಸರಿಪಡಿಸಲು ಮನವಿ



**ಬಳ್ಳಾರಿ, ಅ.8–**ದೇವದಾಸಿ ಮಹಿಳೆಯರ ಕುಟುಂಬದ ಗಣತಿಯಲ್ಲಿನ ಅಸಮರ್ಪಕತೆ ಸರಿಪಡಿಸಲು ಕರ್ನಾಟಕ ರಾಜ್ಯ ದೇವದಾಸಿ ಮಹಿಳೆಯರ ವಿಮೋಚನಾ ಸಂಘ, ಕರ್ನಾಟಕ ರಾಜ್ಯ ದೇವದಾಸಿ ಮಹಿಳೆಯರ ಮಕ್ಕಳ ಹೋರಾಟ ಸಮಿತಿ ರಾಜ್ಯ ಸರ್ಕಾರಕ್ಕೆ ಮನವಿ ಮಾಡಿದೆ.

ಈ ಕುರಿತು ನಗರದಲ್ಲಿಂದು ಪತ್ರಿಕಾಗೋಷ್ಠಿ ನಡೆಸಿದ ಸಂಘಟನೆಯ ಮುಖಂಡರುಗಳು ಪ್ರಮುಖ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿದ್ದಾರೆ.

ಅಂಗನವಾಡಿ ಕೇಂದ್ರ್ರಗಳ ಮೂಲಕವೂ ಮಾಹಿತಿ ಸಂಗ್ರಹಿಸಿ ವಿವರವನ್ನು ಆನ್ ಲೈನ್ ಗಣತಿಗೆ ಕ್ರಮವಹಿಸಬೇಕು., ಆನ್ ಲೈನ್ ಗಣತಿ ಸಂದರ್ಭದಲ್ಲಿ ಬಂದ ಮಹಿಳೆಯರನ್ನು ಗೌರವ ಹಾಗು ಉಪಹಾರ, ನೀರು, ಚಹಾ ಮುಂತಾಗಿ ವ್ಯವಸ್ಥೆ, ಮಾಡಬೇಕು. ಆನ್ ಲೈನ್ ಗಣತಿ ನೆಲ ಮಹಡಿಯಲ್ಲೆ ಅಗತ್ಯ ಹೆಚ್ಚುವರಿ ಪರಿಕರ ಮತ್ತು ಸಿಬ್ಬಂದಿಯೊಂದಿಗೆ ನಡೆಸಬೇಕು. ಗಣತಿಯ

ಅವಧಿಯನ್ನು ಪೂರ್ಣ ವಾಗುವವರೆಗೂ ವಿಸ್ತರಿಸಬೇಕು, ಯಾವುದೇ ವಯೋಮಿತಿ ಹಾಗು ಕಾಯ್ದೆಗಳನ್ನು ತೋರಿಸಿ ಬೆದರಿಸದೆ ಎಲ್ಲ ದೇವದಾಸಿಯರು ಮತ್ತು ಅವರ ಕುಟುಂಬದ

ಮೂರು ತಲೆ ಮಾರಿಗೂ ಅನ್ವಯಿಸುವಂತೆ ಗಣತಿಗೆ ಕ್ರಮವಹಿಸಬೇಕು, ದಾಖಲಾತಿಗಳು ನೀಡಲು ತರುವಾಗ ಸಾಕಷ್ಟು ಭ್ರಷ್ಟಾಚಾರದ ತೊಂದರೆಗೆ ಮಹಿಳೆಯರು ಅವರ ಕುಟುಂಬದ ಸದಸ್ಯರು

ಒಳಗಾಗುತ್ತಿದ್ದಾರೆ. ಇದರ ನಿವಾರಣೆಗೆ ಅಗತ್ಯ ಕ್ರಮವಹಿಸಬೇಕು, ಸಮೀಕ್ಷೆಯ ನಂತರ ಈ ಎಲ್ಲ ಕುಟುಂಬಗಳು ಸ್ವಾವಲಂಬಿ ಬದುಕು ಪಡರಯಲು ಅಗತ್ಯವಾದ ಪರಿಣಾಮಕಾರಿ ಪುನರ್ವಸತಿಗೆ

ಕ್ರಮವಹಿಸಬೇಕು, ದೇವದಾಸಿ ಮಹಿಳೆಯರಿಗೆ ನೀಡುವ ಮಾಸಿಕ ಸಹಾಯಧನ ಅಥವಾ ಪೆನ್ಷನ್ ಅನ್ನು ಕನಿಷ್ಟ 5000 ರೂಗಳಿಗೆ ಹೆಚ್ಚಿಸಬೇಕು. ಈ ಕುಟುಂಬಗಳ ಪರಿತ್ಯಕ್ತ ಮಹಿಳೆಯರಿಗೂ ಮಾಸಿಕ ಸಹಾಯಧನ ವಿಸ್ತರಿಸಬೇಕು. ವಿದ್ಯಾವಂತ ಮಕ್ಕಳಿಗೆ ನಿರುದ್ಯೋಗ ಮಾಸಿಕ ಭತ್ಯೆ ನೀಡಬೇಕು, ಗ್ರಾಮೀಣ ಪ್ರದೇಶದಲ್ಲಿ ಹೆಚ್ಚು ಜಮೀನನ್ನು ಹೊಂದಿರುವವರಿಂದ ಭೂ ಸ್ವಾಧೀನ ಮಾಡಿಕೊಂಡು ಕಾಲಮಿತಿಯೊಳಗೆ ಇವರ

ಕುಟುಂಬದ ಸದಸ್ಯರು ಸೇರಿದಂತೆ ಇವರ ಸಮುದಾಯಗಳ ಇತರೆ ಕುಟುಂಬಗಳ ಸ್ವಾವಲಂಬಿತನಕ್ಕೆ ಕ್ರಮವಹಿಸಬೇಕು ಎಂದು ಮನವಿ ಮಾಡಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಕರ್ನಾಟಕ ರಾಜ್ಯ ದೇವದಾಸಿ ಮಹಿಳೆಯರ ವಿಮೋಚನಾ ಸಂಘ ಗೌರವಾಧ್ಯಕ್ಷರು ಯು ಬಸವರಾಜ್, ರಾಜ್ಯಾಧ್ಯಕ್ಷರು ಹುಲಿಗೆಮ್ಮ ಬಳ್ಳಾರಿ ಜಿಲ್ಲಾ ಕಾರ್ಯದರ್ಶಿ ಎ ಸ್ವಾಮಿ ಬಳ್ಳಾರಿ ಜಿಲ್ಲಾ ಅಧ್ಯಕ್ಷರು ಈರಮ್ಮ ಕುರುಗೋಡು ತಾಲೂಕು ಕಾರ್ಯದರ್ಶಿ, ಸಿ ವೀರೇಶ್ ಭಾಗವಹಿಸಿದ್ದರು

## ವಕೀಲ ಕಿಶೋರ ವಿರುದ್ಧ ದೇಶದ್ರೋಹ ಪ್ರಕರಣ ದಾಖಲಿಸಲು ; ದತ್ತಾತ್ರೇಯ ಕುಡಕಿ ಆಗ್ರಹ

**ಕಲಬುರಗಿ, ಅ.8–**ಬೂಟ್ ನೆಕ್ಕಿದವರ ಸಂಸ್ಕೃತಿಯಿಂದ ವಕೀಲ ಕಿಶೋರ ರಾಕೇಶ ಜಾತಿ ಭಯೋತ್ಪಾದಕರದ್ದೆ ಆಗಿರುತ್ತದೆ. ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಅವಮಾನ ಮಾಡಿರುವ ವಕೀಲ ಮೇಲೆ ದೇಶದ್ರೋಹ ಪ್ರಕರಣ ದಾಖಲಿಸಬೇಕು ಎಂದು ಅಖಿಲ ಕರ್ನಾಟಕ ದಲಿತ ಸೇನೆಯ ರಾಜ್ಯಾಧ್ಯಕ್ಷರಾದ ದತ್ತಾತ್ರೇಯ ಕುಡಕಿ ಆಗ್ರಹ ಪಡಿಸಿದರು.

ಪತ್ರಿಕಾ ಹೇಳಿಕೆ ಬಿಡುಗಡೆ ಮಾಡಿದ ಅವರು, ವಕೀಲ ಮಾಡಿದ್ದು, ಇದು ಸರಿ ಎಂದು ಕೆಲವು ವಿಷಕಾರಿ ಜಂತುಗಳು ವಿಷಕಾರುತ್ತಿರುವ ಮನುವಾದಿಗಳು. ವಿದೇಶಿದಿಂದ ಭಾರತಕ್ಕೆ ಆಗಮಿಸಿರುವ ಆರ್ಯರ, ಆರ್ಯಭಯೋತ್ಪಾದನೆ ಉಗ್ರಗಾಮಿ, ಶಿಬಿರದಿಂದ ಬಂದವನು ನಾಲಾಯಕ ಕಿಶೋರ ರಾಕೇಶ ಇರಬಹುದು ಎಂದು ಕುಡಕಿ ಅಕ್ರೋಶ ವ್ಯಕ್ತಪಡಿಸಿದರು.

ಸುಪ್ರೀಂ ಕೋರ್ಟ್ ಗೆ ಒಬ್ಬ ದಲಿತ ಮುಖ್ಯ ನ್ಯಾಯ ಮೂರ್ತಿಯಾಗಿದ್ದು ಸಹಿಸದ ಮನುವಾದಿಗಳು ಮೀಸಲಾತಿಯಿಂದ ಆಯ್ಕೆ ಆಗಿದ್ದು ಎಂದು ಜಾತಿ ನಿಂದಿಸಿ ಬೊಗಳುವ ಜಾತಿ ಹೆಸರಿಸಿ ನಿಂದಿಸುವ ನೀಚರುಗಳಿಗೆ ಬಿ.ಆರ್. ಗವಾಯಿ ಮೀಸಲಾತಿಯಿಂದ ಬಂದವರಲ್ಲ ಏಕೆಂದರೆ ನ್ಯಾಯಾಂಗದಲ್ಲಿ ಮೀಸಲಾತಿ ಇಲ್ಲ. ಸ್ವಂತ ಪ್ರತಿಭೆಯಿಂದ ಆಯ್ಕೆಯಾದ ಬಿ. ಆರ್. ಗವಾಯಿ ಅವರು ಹೇಳಿರುವ ಮಾತು ಮನುವಾದಿಗಳಿಗೆ ಸಹಿಸಿಕೊಳ್ಳಲು ಆಗುತ್ತಿಲ್ಲ ಎಂದು ತಿಳಿಸಿದರು.ಭಾರತದ ಸಂವಿಧಾನದ ಸರ್ವೋಚ್ಚ ನ್ಯಾಯಾಲಯ ಸುಪ್ರೀಂ ಕೋರ್ಟ್ ನ 52 ನೇ ಮುಖ್ಯ ನ್ಯಾಯಧೀಶರಾದ ಡಾ. ಬಿ.ಆರ್. ಗವಾಯಿ ಅವರ ಮೇಲೆ ನಡೆದ ಇಂದಿನ ಈ ಘಟನೆಯನ್ನು ಅಖಿಲ ಕರ್ನಾಟಕ ದಲಿತ ಸೇನೆಯು ಉಗ್ರವಾಗಿ ಖಂಡಿಸುತ್ತದೆ. ಮತ್ತು ವಕೀಲ ಕಿಶೋರ ರಾಕೇಶ ವಿರುದ್ಧ ದೇಶದ್ರೋಹ ಪ್ರಕರಣ ದಾಖಲಿಸಲು ಅಗ್ರಹ ಪಡಿಸುತ್ತದೆ.ಈ ಸಂದರ್ಭದಲ್ಲಿ ಗೌರವಾಧ್ಯಕ್ಷರಾದ ಆನಂದರಾಯ ಗಾಯಕವಾಡ.ಆಳಂದ ತಾಲೂಕಾಧ್ಯಕ್ಷರಾದ ಭೋಜರಾಜ ಜುಭ್ರೆ,ಸಾಮಾಜಿಕ ಜಾಲತಾಣದ ಅಧ್ಯಕ್ಷರಾದ ಸಂಜೀವಕುಮಾರ ಕಾಂಬಳೆ ಅವರು ಖಂಡಿಸಿರುತ್ತಾರೆ.

# ಮಲ್ಲಿನಾಯಕನದೊಡ್ಡಿ ಶ್ರೀಭಾಗ್ಯವಂತಿ ದೇವಿ ಜಾತ್ರಾ ಮಹೋತ್ಸವ

**ಯುವ ಮಾರ್ಗ ಸುದ್ದಿ**



**ಅರಕೇರಾ,ಅ.8–**ತಾಲೂಕಿನ ಮಲ್ಲಿನಾಯಕನದೊಡ್ಡಿ ಗ್ರಾಮದಲ್ಲಿ ಪ್ರತಿವರ್ಷದಂತೆ ಶೀಗಿ ಹುಣಿಮೆಯ ಪ್ರಯುಕ್ತ ಶ್ರೀ ಭಾಗ್ಯವಂತಿದೇವಸ್ಥಾನದಲ್ಲಿ ಜಾತ್ರಾ ಮಹೋತ್ಸವ ಅಂಗವಾಗಿ ಮುಂಜಾನೆ ದೇವಸ್ಥಾನದಲ್ಲಿ ಆರ್ಚಕರಿಂದಅಭಿಷೇಕ ವಿಶೇಷ ಪೂಜಾ ಕಾರ್ಯಕ್ರಮಗಳು ಜರುಗಿದವು. ಭಕ್ತರು ಮುಂಜಾನೆಯಿಂದ ದೇವಸ್ಥಾನಕ್ಕೆ ಕಾಯಿ ಕರ್ಪೂರ ನೈವೆದ್ಯ ನೀಡುತ್ತಿರುವದು ಸಾಮಾನ್ಯವಾಗಿ ಕಂಡು ಬಂದಿತು.ಮುಂಜಾನೆ ಉತ್ಸವ ಜರುಗಿತ್ತು ಸಾಯಂಕಲಾ ರಥೋತ್ಸವ ಮಹೋತ್ಸವವು ಹನುಮೇಶತಾತನ ಶ್ರೀ ಸೋಮಶೇಖರಯ್ಯ ಸ್ವಾಮಿ ಶರಣರು ಶ್ರೀಶಾಂಭವಿ ಮಠ ಲಿಂಗಸ್ಗೂರು ಸಾನಿದ್ಯದಲ್ಲಿ ಅದ್ದೂರಿಯಾಗಿ ಜರುಗಿತು.

ಗ್ರಾಮದಲ್ಲಿನ ಭಕ್ತಾದಿಗಳು ಮುಂಜಾನೆಯಿಂದ ದೇವಸ್ಥಾನದಲ್ಲಿ ವಿವಿಧ ದಾರ್ಮಿಕ ಪೂಜೆ ವಿಧಾನಗಳು ನಡೆಸಿಸದರು ಹಾಗೂ ಉತ್ಸವಕ್ಕೆ ವಿವಿಧ ಹೂವಿನ ಅಲಂಕರಗೊಳಿಸಿದ್ದರು. ಜಾತ್ರ ಮಹೋತ್ಸವಕ್ಕೆ ಸಕಲ ಸದ್ಭಕ್ತಾಧಿಗಳು ಮಹಿಳೆಯರು ಕಳಸದೊಂದಿಗೆ ಕಾರ್ಯಕ್ರಮಕ್ಕೆ ಮೇರುಗುತಂದರು, ಜೋಗುತ್ತಿಯರು,ಡೊಳ್ಳು,ಬಾಜಿಬಜಂತ್ರಿ ಮೇಳಗಳು ಜಾತ್ರೆಗೆ ಮೇರು ತಂದುಕೊಟ್ಟಿತ್ತು ಜಾತ್ರೆಗೆ ಬಂದ ಬಕ್ತಾಧಿಗಳಿಗೆಅನ್ನ ಪ್ರಸಾದ ವ್ಯವಸ್ಥೆ ಕಲ್ಪಿಸಲಾಗಿತ್ತು. ಸುತ್ತಮುತ್ತಲ್ಲಿನಿಂದ ಸಾವಿರಾರು ಭಕ್ತರು ಜಾತ್ರಗೆ ಆಗಮಿಸಿ ದೇವಿಯ ದರ್ಶನಪಡೆದರು. ಮುಂಜಾನೆ ಉತ್ಸವ ಕಾರ್ಯಕ್ರಮ ಜರುಗಿತು ಸಾಯಂಕಲಾ 6ಗಂಟೆಗೆ ರಥೋತ್ಸವ ಕಾರ್ಯಕ್ರಮ ನಡೆಯಿತು.

ಸಂದರ್ಭದಲ್ಲಿ ಶ್ರೀ ಸಿದ್ದಣ್ಣ ತಾತ ಮರಿಸಿಲಿಂಗ ಪೂಜಾರಿ ಹಂಪಯ್ಯನಾಯಕ,ಚಂದ್ರಶೇಖರ ಉಪಾಯುಕ್ತರು ವಾಣಿಜ್ಯ ತೇರಿಗೆ ಇಲಾಖೆ ರಾಯಚೂರು, ಶಿವರಾಜನಾಯಕ ಗುರಿಕಾರ ಗ್ರಾ.ಪಂ,ಸ. ಲಿಂಗಣ್ಣನಾಯಕ ಹವಲ್ದಾರ, ಶಿವಪ್ಪಗುರಿಕಾರ ಮಾಜಿ ಗ್ರಾ.ಪಂ.ಸ. ಸಿದ್ದಪ್ಪ ಗುರಿಕಾರ. ಅನಿಲ್ ಕುಮಾರ, ಶಿವರಾಜನಾಯಕ,ಮೌನೇಶಕೋರಿವಿ ಹನುಮಯ್ಯಕೊರಿವಿ ಹನುಮಂತ ಗುತ್ತೇದಾರ ಸೇರಿದಂತೆ ಸುತ್ತಮುತ್ತಲ್ಲಿನ ಭಕ್ತಾಧಿಗಳುಹಾಗೂ ಗ್ರಾಮಸ್ಥರು ಉಪಸ್ಥಿತರಿದ್ದರು.

## ಮುಖ್ಯ ನ್ಯಾಯಮೂರ್ತಿ ಮೇಲೆ ಶೂ ಎಸೆಯಲು ಯತ್ನ: ಆರೋಪಿ ವಕೀಲನ ಗಡಿಪಾರಿಗೆ ಬಹುಜನ ಸಂಘರ್ಷ ಸಮಿತಿ ಆಗ್ರಹ

**ಯುವ ಮಾರ್ಗ ಸುದ್ದಿ**

**ಮಾನ್ವಿ,ಅ.8–** ಸುಪ್ರೀಂ ಕೋರ್ಟ್‌ನ ನ್ಯಾಯಮೂರ್ತಿ ಬಿ. ಆರ್. ಗವಾಯಿ ಅವರ ಮೇಲೆ ಕೋರ್ಟ್ ಹಾಲ್‌ನಲ್ಲಿ ಶೂ ಎಸೆಯಲು ಯತ್ನಿಸಿದ ಜಾತಿವಾದಿ ವಕೀಲನ ವಿರುದ್ಧ ಸೂಕ್ತ ಕಾನೂನು ಕ್ರಮ ಕೈಗೊಂಡು ಆತನನ್ನು ದೇಶದಿಂದ ಗಡಿಪಾರು ಮಾಡಬೇಕೆಂದು ಬಹುಜನ ಸಂಘರ್ಷ ಸಮಿತಿಯ ಸಮಿತಿ ಪತ್ರಿಕಾ ಪ್ರಕಟಣೆ ಮೂಲಕ ಒತ್ತಾಯಿಸಿದೆ.

ದಿನಾಂಕ ಅಕ್ಟೋಬರ್ 6, 2025 ರಂದು ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಬಿ. ಆರ್.ಗವಾಯಿ ಅವರು ನ್ಯಾಯಾಲಯದ ಕಲಾಪಗಳನ್ನು ನಡೆಸುತ್ತಿದ್ದ ಸಂದಭರ್ದಲ್ಲಿ ರಾಕೇಶ್ ಕಿಶೋರ್ ಎಂಬ ಮನುವಾದಿ ಜಾತಿವಾದಿ ವಕೀಲನು ನ್ಯಾಯಮೂರ್ತಿಗಳ ಮೇಲೆ ಶೂ ಎಸೆಯಲು ಯತ್ನಿಸಿದ ಕೃತ್ಯವು ದೇಶದ್ರೋಹದ ಕೃತ್ಯವಾಗಿದೆ ಎಂದು ಸಮಿತಿ ಖಂಡಿಸಿದೆ.

ಈ ಕೃತ್ಯವು "ದೇಶದ ಭವಿಷ್ಯಕ್ಕೆ ಮಾರಕವಾಗಿದೆ" ಮತ್ತು ಅತ್ಯುನ್ನತ ಸ್ಥಾನದಲ್ಲಿರುವ ನ್ಯಾಯಮೂರ್ತಿ ಗವಾಯಿ ಅವರಿಗೆ ಇಂತಹ ಪರಿಸ್ಥಿತಿ ಎದುರಾದಾಗ, ದೇಶದ ಸಾಮಾನ್ಯ ಜನರ ಸ್ಥಿತಿ ಏನಾಗಿರಬಹುದು.

ಘಟನೆ ನಡೆದ ನಂತರವೂ ವಿಚಲಿತರಾಗದೆ, "ನಾನು ಇದರಿಂದ ವಿಚಲಿತನಾಗುವುದಿಲ್ಲ, ನೀವು ಕೂಡ ವಿಚಲಿತರಾಗಬೇಡಿ ಮತ್ತು ಪ್ರಕರಣವನ್ನು ಮುಂದುವರಿಸಿ" ಎಂದು ಹೇಳಿ ವಿಚಾರಣೆಯನ್ನು ಮುಂದುವರಿಸಿದ ನ್ಯಾಯಮೂರ್ತಿ ಗವಾಯಿ ಅವರ ಹೃದಯ ವೈಶಾಲ್ಯತೆಯನ್ನು ಬಹುಜನ ಸಂಘರ್ಷ ಸಮಿತಿ ಶ್ಲಾಘಿಸಿದೆ. ಡಾ.ಬಿ.ಆರ್.ಅಂಬೇಡ್ಕರ್ ಅವರ ಅನುಯಾಯಿಗಳಾದ ಗವಾಯಿ ಅವರು ಸಂವಿಧಾನದ ಮಾರ್ಗವನ್ನು ಅನುಸರಿಸಿ ಇಡೀ ದೇಶಕ್ಕೆ ಮಾದರಿಯಾಗಿದ್ದಾರೆ.

"ಈ ಘಟನೆಯು ಇಡೀ ನ್ಯಾಯಾಂಗ ವ್ಯವಸ್ಥೆಗೆ ಹಾಗೂ ಸಂವಿಧಾನಕ್ಕೆ ಮಾಡಿದ ಅವಮಾನವಾಗಿದೆ," ಆದ್ದರಿಂದ, ದೇಶದ್ರೋಹಿ ಮತ್ತು ಜಾತಿವಾದಿ ಭಯೋತ್ಪಾದಕನಾದ ಆರೋಪಿ ವಕೀಲನನ್ನು ದೇಶದಿಂದ ಗಡಿಪಾರು ಮಾಡಬೇಕು ಎಂದು ಬಹುಜನ ಸಂಘರ್ಷ ಸಮಿತಿ ಜಿಲ್ಲಾಧ್ಯಕ್ಷ ಸಂಪತ್ ರಾಜ್ ಜಾಗಿರಪನ್ನೂರ್, ತಾಲೂಕ ಅಧ್ಯಕ್ಷ ಯಮನಪ್ಪ ಪನ್ನೂರು ಅವರು ಪ್ರಕಟಣೆ ಮೂಲಕ ಆಗ್ರಹಿಸಿದ್ದಾರೆ.

# ಸಿರವಾರ: ಮಹರ್ಷಿ ವಾಲ್ಮೀಕಿ ಜಯಂತಿ ಆಚರಣೆ

**ಯುವ ಮಾರ್ಗ ಸುದ್ದಿ**

**ಸಿರವಾರ, ಅ.8–**ರಾಮಾಯಣ ಎಂಬ ಮಹಾಕಾವ್ಯವನ್ನು ರಚನೆ ಮಾಡಿದ ಆದಿಕವಿ ಮಹರ್ಷಿ ಶ್ರೀವಾಲ್ಮೀಕಿ ಜಯಂತಿಯನ್ನು ಪಟ್ಟಣದಲ್ಲಿ ಮಂಗಳವಾರ ತಹಶೀಲ್ದಾರ್ ಕಾರ್ಯಾಲಯ, ಪಟ್ಟಣ ಪಂಚಾಯತಿ ವಿವಿಧ ತಾಲ್ಲೂಕು ಕಚೇರಿ ಹಾಗೂ ಶಾಲಾ ಕಾಲೇಜುಗಳಲ್ಲಿ, ವಾಲ್ಮೀಕಿ ವೃತ್ತದಲ್ಲಿ ವಾಲ್ಮೀಕಿ ಭಾವಚಿತ್ರಕ್ಕೆ ಪೂಜೆಸಲ್ಲಿಸಿ, ಮಾಲಾರ್ಪಣೆ ಮಾಡುವ ಮೂಲಕ ಮಹರ್ಷಿ ಶ್ರೀ ವಾಲ್ಮೀಕಿ ಜಯಂತಿಯನ್ನು ಅರ್ಥಪೂರ್ಣವಾಗಿ ಆಚರಣೆ ಮಾಡಲಾಯಿತು.



ಈ ಸಂದರ್ಭದಲ್ಲಿ ತಹಶೀಲ್ದಾರ್ ಆಶೋಕ ಪವಾರ್, ಪ.ಪಂ.ಅಧ್ಯಕ್ಷ ವೈ.ಭೂಪನಗೌಡ, ಪ.ಪಂ.ಮುಖ್ಯಾಧಿಕಾರಿ ಸುರೇಶ ಶೆಟ್ಟಿ, ಸರಕಾರಿ ನೌಕರರ ಸಂಘದ ಅಧ್ಯಕ್ಷ ಆರೀಫ್ ಮಿಯ್ಯಾ, ವಾಲ್ಮೀಕಿ ಸಮಾಜದ ತಾಲ್ಲೂಕು ಅಧ್ಯಕ್ಷ ಬಸವರಾಜ ನಾಯಕ ಕಲ್ಲೂ ರು, ಪ.ಪಂ.ಸದಸ್ಯರಾದ ಕೃಷ್ಣ ನಾಯಕ, ಸೂರಿ ದುರಗಣ್ಣ, ಅಮರೇಶ ಗಡ್ಲ, ಚನ್ನಪ್ಪ ಗಡ್ಲ, ಶಿವುಕುಮಾರ ಕಲ್ಲೂರು, ಲಕ್ಷ್ಮಣ ನಾಯಕ, ರಂಗನಾಥ ನಾಯಕ, ದುರ್ಗಾ ಪ್ರಸಾದ, ಶರೀಫ್ ಮರಾಠ, ಶಾಂತಪ್ಪ ಪಿತಗಲ್, ಮೌನೇಶ ನವಲಕಲ್, ರವಿ ಮಲ್ಲಟ, ಬಸವರಾಜ ನಾಯಕ ಮಲ್ಲಟ, ದೇವರಾಜ ನಾಯಕ ಮರಾಠ, ಶಂಕರ್ ಮರಾಠ ಸೇರಿದಂತೆ ಅನೇಕರು ಇದ್ದರು.

## ಸಾಮಾಜಿಕ–ಶೈಕ್ಷಣಿಕ ಸಮೀಕ್ಷೆಗಾಗಿ ಶಾಲೆಗಳಿಗೆ ರಜೆ ವಿಸ್ತರಣೆ:ಎಐಡಿಎಸ್‌ಓ ಆಕ್ಷೇಪ

**ಕಲಬುರಗಿ,ಅ.8–**ರಾಜ್ಯ ಸರ್ಕಾರವು ಸಾಮಾಜಿಕ–ಶೈಕ್ಷಣಿಕ ಸಮೀಕ್ಷೆಗಾಗಿ ಸರ್ಕಾರಿ ಹಾಗೂ ಅನುದಾನಿತ ಶಾಲೆಗಳ ರಜೆಯನ್ನು ವಿಸ್ತರಿಸಿರುವುದಕ್ಕೆ ಆಲ್ ಇಂಡಿಯಾ ಡೆಮಾಕ್ರಟಿಕ್ ಸ್ಟೂಡೆಂಟ್ಸ್ ಆರ್ಗನೈಸೇಷನ್ ವ್ಯಕ್ತಪಡಿಸಿದೆ.

ಸರ್ಕಾರದ ಈ ಕ್ರಮವು ಅತ್ಯಂತ ಅಪ್ರಜಾತಾಂತ್ರಿಕವಾಗಿದ್ದು, ಇದರಿಂದ ಸರ್ಕಾರಿ ಹಾಗೂ ಅನುದಾನಿತ ಶಾಲಾ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ಒದಗಿಸಲು ಅಡ್ಡಿ ಎದುರಾಗುವುದರಲ್ಲಿ ಸಂಶಯವಿಲ್ಲ. ಇದರಿಂದಾಗಿ ಖಾಸಗಿ ಶಾಲಾ ಮತ್ತು ಸರ್ಕಾರಿ ಶಾಲಾ ಮಕ್ಕಳ ನಡುವೆ ಭೀಕರ ತಾರತಮ್ಯ ಉಂಟಾಗುವ ಆತಂಕ ಎದುರಾಗಿದೆ.ಈಗಾಗಲೇ ಶಾಲಾ ಶಿಕ್ಷಕರು ಭೋದನೆ ಮಾಡುವ ಜೊತೆಗೆ ಭೋದಕೇತರ ಚಟುವಟಿಕೆಗಳ ಜವಾಬ್ದಾರಿಗಳನ್ನು ನಿರ್ವಹಿಸುವ ದುಸ್ಥಿತಿ ಇದ್ದು, ಈ ಸಮೀಕ್ಷೆಯ ಜವಾಬ್ದಾರಿಯು ಹೊರೆಯಾಗಲಿದೆ ಎಂದು ಶಿಕ್ಷಕರಿಂದಲೂ ಕೇಳಿಬರುತ್ತಿದೆ. ರಜೆ ವಿಸ್ತರಣೆ ಆದರೇ ಕಡಿಮೆ ಸಮಯದಲ್ಲಿ ಪಾಠಗಳನ್ನು ಸಂಪೂರ್ಣಗೊಳಿಸುವ ಒತ್ತಡಕ್ಕೆ ಶಿಕ್ಷಕರು ಸಿಲುಕಲಿದ್ದಾರೆ. ಅಲ್ಲದೇ ಈ ಕ್ರಮವು ಸರ್ಕಾರಿ ಶಾಲಾ ಮಕ್ಕಳ ಶೈಕ್ಷಣಿಕ ಸ್ಥಿರತೆಯನ್ನು ಹಾಳು ಮಾಡುತ್ತದೆ. ಬೋಧನೆ ಮತ್ತು ಕಲಿಕೆಯ ಶಾಲಾ ಪ್ರಮುಖ ಕಾರ್ಯಕ್ಕೆ ತೊಂದರೆಯಾಗದಂತೆ ಪೂರಕ ಯೋಜನೆಯಿಲ್ಲದೆ, ಚರ್ಚೆಯು ಮಾಡದೇ ಶಾಲೆಗಳಿಗೆ ಏಕಾಏಕಿ ರಜೆಯನ್ನು ವಿಸ್ತರಿಸಿರುವುದು ಶೋಚನೀಯ ಸಂಗತಿಯಾಗಿದೆ. ಜೊತೆಗೆ ಸರ್ಕಾರಿ ಶಾಲಾ ಮಕ್ಕಳ ಫಲಿತಾಂಶ ಕುಸಿಯುವ ಭೀತಿ ಉಂಟಾಗಿದೆ. ಸಮೀಕ್ಷೆಯ ಕೆಲಸಕ್ಕೆ ಸರ್ಕಾರಿ ಶಾಲಾ ಸಮಯವನ್ನು ಬಲಿಕೊಡದೆ, ಮಕ್ಕಳ ಶೈಕ್ಷಣಿಕ ಭವಿಷ್ಯದ ಹಿತದೃಷ್ಟಿಯಿಂದ ರಜೆ ವಿಸ್ತರಣೆಯ ಆದೇಶವನ್ನು ಹಿಂಪಡೆದು, ಸಮೀಕ್ಷೆಯ ಕೆಲಸಕ್ಕೆ ಪರ್ಯಾಯ ವ್ಯವಸ್ಥೆಗೆ ಸರ್ಕಾರವುಕ್ರಮ ಕೈಗೊಳ್ಳಬೇಕೆಂದು ಎಐಡಿಎಎಸ್‌ಓ ಜಿಲ್ಲಾ ಕಾರ್ಯದರ್ಶಿ ತುಳಜರಾಮ ಎನ್.ಕೆ.ಆಗ್ರಹಿಸಿದ್ದಾರೆ.

## ವಿದೇಶಿ ಅಂಚೆ ಕಚೇರಿ ಮೂಲಕ ಡ್ರಗ್ಸ್ ಸಾಗಾಟವನ್ನು ಗಂಭೀರವಾಗಿ ಪರಿಗಣಿಸಿದ ಪೊಲೀಸರು

**ಬೆಂಗಳೂರು,ಅ.8–** ನಗರದಲ್ಲಿರುವ ವಿದೇಶಿ ಅಂಚೆ ಕಚೇರಿಗೆ ನಿಷೇದಿತ ಮಾದಕ ವಸ್ತುಗಳ ಪಾರ್ಸಲ್ ಬರುತ್ತಿರುವುದನ್ನು ಗಂಭೀರವಾಗಿ ಪರಿಗಣಿಸಲಾಗಿದೆ ಎಂದು ನಗರ ಪೊಲೀಸ್ ಆಯುಕ್ತ ಸೀಮಂತ್‌ಕುಮಾರ್ ಸಿಂಗ್ ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ವಿದೇಶಿ ಅಂಚೆ ಕಚೇರಿಯಲ್ಲಿನ ಅಧಿಕಾರಿಗಳು ಮತ್ತು ಸಿಬ್ಬಂದಿಗಳು ಈ ಜಾಲದಲ್ಲಿ ಸಿಲುಕಿದ್ದಾರೆಯೇ ಎಂಬ ಬಗ್ಗೆ ತನಿಖೆ ನಡೆಸಲಾಗುವುದು ಎಂದು ತಿಳಿಸಿದರು.

ಕೆಂಪೇಗೌಡ ನಗರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿರುವ ಈ ವಿದೇಶಿ ಅಂಚೆ ಕಚೇರಿಗೆ ನಿರಂತರವಾಗಿ ನಿಷೇದಿತ ಮಾದಕ ವಸ್ತುಗಳು ವಿದೇಶಗಳಿಂದ ಪಾರ್ಸಲ್ ಮೂಲಕ ಬರುತ್ತಿದ್ದರೂ ಯಾವುದೇ ಕ್ರಮ ಕೈಗೊಳ್ಳುತ್ತಿಲ್ಲವೆಂಬ ಸುದ್ದಿಗಾರರ ಪ್ರಶ್ನೆಗೆ ಅವರು ಉತ್ತರಿಸಿದ್ದಾರೆ.

ಈ ವಿದೇಶಿ ಅಂಚೆ ಕಚೇರಿ ದಕ್ಷಿಣ ವಿಭಾಗದಲ್ಲಿರುವುದರಿಂದ ಆ ವಿಭಾಗದ ಡಿಸಿಪಿ ಯವರು ಈ ಬಗ್ಗೆ ತನಿಖೆ ನಡೆಸುತ್ತಿದ್ದಾರೆ. ಈಗಾಗಲೇ ಅಧಿಕಾರಿಗಳ ಜೊತೆ ಡಿಸಿಪಿ ಅವರು ಒಂದು ಸುತ್ತಿನ ಚರ್ಚೆ ನಡೆಸಿದ್ದಾರೆಂದು ಆಯುಕ್ತರು ಹೇಳಿದರು.

ಮುಂದಿನ ದಿನಗಳಲ್ಲಿ ನಾವು ವಿದೇಶಿ ಅಂಚೆ ಕಚೇರಿಗೆ ಬರುವಂತಹ ಪಾರ್ಸಲ್‌ಗಳ ಮೇಲೆ ಇನ್ನೂ ಹೆಚ್ಚಿನ ನಿಗಾ ವಹಿಸುತ್ತೇವೆ. ನಿರಂತರವಾಗಿ ಡ್ರಗ್ಸ್ ಸಾಗಾಟ ಮತ್ತು ಮಾರಾಟದ ಮೇಲೆ ಹದ್ದಿನ ಕಣ್ಣಿಟ್ಟಿದ್ದೇವೆ. ನಮಗೆ ಕೇಂದ್ರದ ಎಜೆನ್ಸಿಗಳು, ಹೊರ ರಾಜ್ಯಗಳ ಪೊಲೀಸ್ ಅಧಿಕಾರಿಗಳು ಸಹಕಾರ ನೀಡುತ್ತಿದ್ದಾರೆ ಎಂದರು.

ಒಟ್ಟಾರೆ ನಗರದಲ್ಲಿ ಮಾದಕ ವಸ್ತು ಮಾರಾಟ ಮತ್ತು ಸಾಗಾಣಿಕೆಯನ್ನು ಸಂಪೂರ್ಣವಾಗಿ ನಿಷೇಧಿಸಲು ಕಟ್ಟುನಿಟ್ಟಿನ ಕ್ರಮಕೈಗೊಳ್ಳುತ್ತೆ?ವೆಂದು ಸೀಮಂತ್‌ಕುಮಾರ್‌ಸಿಂಗ್ ಹೇಳಿದರು.

## ತಾಲೂಕಿನಲ್ಲಿ ಸಮೀಕ್ಷೆಯಿಂದ ಹೊರಗುಳಿದಿರುವ ಕುಟುಂಬಗಳು ವಾರ್ ರೂಮ್‌ಗೆ ಮಾಹಿತಿ ನೀಡಿ

**ಮಾನ್ವಿ,ಅ.8–** ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗದ ವತಿಯಿಂದ ನಡೆಯುತ್ತಿರುವ ಸಾಮಾಜಿಕ ಹಾಗೂ ಶೈಕ್ಷಣಿಕ ಸಮೀಕ್ಷೆ–2025ರ ಅಂಗವಾಗಿ 275 ಸಮೀಕ್ಷಾದಾರರಿಂದ ಮಾನ್ವಿ ತಾಲೂಕಿನಲ್ಲಿ ಒಟ್ಟು 3,1,817ಕುಟುಂಬಗಳ ಸಮೀಕ್ಷೆಯನ್ನು ಸರಕಾರದ ಗಡುವಿಗಿಂತ ಮುಂಚಿತವಾಗಿ ಪೂರ್ಣಗೊಳಿಸಲಾಗಿದ್ದೆ ತಾಲೂಕಿನಲ್ಲಿ ಸಮೀಕ್ಷೆಯಿಂದ ಹೊರಗುಳಿದಿರುವ ಕುಟುಂಬಗಳು ಮಾನ್ವಿ ತಹಶೀಲ್ದಾರರ ಕಾರ್ಯಾಲಯದಲ್ಲಿನ ವಾರ್ ರೂಮ್ ದೂ.ಸಂಖ್ಯೆ 9008900527, 8746851245, 7676359015 ಗೆ ಮಾಹಿತಿಯನ್ನು ನೀಡಿದ್ದಲ್ಲಿ ಸಮೀಕ್ಷಾ ಕಾರ್ಯವನ್ನು ಕೈಗೊಳ್ಳಲಾಗುವುದು ಎಂದು ತಹಸೀಲ್ದಾರ್ ಭೀಮರಾವ್ ಬಿ.ರಾಮಸಮುದ್ರ ರವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ನೀರಿನ ಟ್ಯಾಂಕ್‌ನಲ್ಲಿ ಶವ ಪತ್ತೆ ಹತ್ತು ದಿನ ಅದೇ ನೀರು ಬಳಕೆ

**ದೇವರಿಯಾ,ಅ.8–**ಉತ್ತರ ಪ್ರದೇಶದ ದೇವರಿಯಾದಲ್ಲಿರುವ ಮಹರ್ಷಿ ದೇವರಹ ಬಾಬಾ ವೈದ್ಯಕೀಯ ಕಾಲೇಜಿನ ಐದನೇ ಮಹಡಿಯಲ್ಲಿರುವ ಸಿಮೆಂಟ್ ನೀರಿನ ಟ್ಯಾಂಕ್‌ನಲ್ಲಿ ಯುವಕನ ಕೊಳೆತ ಶವ ಪತ್ತೆಯಾಗಿದೆ.ಸುಮಾರು ಹತ್ತು ದಿನಗಳಿಂದ ಕೊಳೆತ ದೇಹವಿರುವ ಟ್ಯಾಂಕ್ ನೀರನ್ನೇ ವಿದ್ಯಾರ್ಥಿಗಳು ಮತ್ತು ಸಿಬ್ಬಂದಿ ಬಳಸಿದ್ದಾರೆ ಎನ್ನಲಾಗಿದೆ.

ಸೋಮವಾರ ಮಧ್ಯಾಹ್ನ ಆಸ್ಪತ್ರೆಗೆ ದಾಖಲಾದ ರೋಗಿಗಳ ಸಂಬಂಧಿಕರು ನೀರಿನಲ್ಲಿ ದುರ್ವಾಸನೆ ಬರುತ್ತಿದೆ ಎಂದು ಆಸ್ಪತ್ರೆ ಆಡಳಿತ ಮಂಡಳಿಗೆ ದೂರು ನೀಡಿದಾಗ ಈ ಘಟನೆ ಬೆಳಕಿಗೆ ಬಂದಿದೆ. ನಂತರ ಸ್ವಚ್ಛಗೊಳಿಸುವ ಸಿಬ್ಬಂದಿ ನೀರಿನ ಟ್ಯಾಂಕ್‌ಗೆ ಹತ್ತಿ ಅದನ್ನು ಸ್ವಚ್ಛಗೊಳಿಸಿ ಸ್ಲ್ಯಾಬ್ ತೆಗೆದಿದ್ದಾರೆ. ಒಳಗೆ ಮೃತ ದೇಹ ಕಂಡು ಅವರು ಆಘಾತಕ್ಕೊಳಗಾಗಿದ್ದಾರೆ ಪೊಲೀಸರಿಗೆ ತಕ್ಷಣ ಮಾಹಿತಿ ನೀಡಲಾಯಿತು, ನಂತರ ಕೊಟ್ವಾಲಿ ಪೊಲೀಸರು ಮತ್ತು ವಿಧಿವಿಜ್ಞಾನ ತಂಡವು ಸ್ಥಳಕ್ಕೆ ಆಗಮಿಸಿದೆ.

ನಗರ ಪೊಲೀಸ್ ವರಿಷ್ಠಾಧಿಕಾರಿ ಸಂಜಯ್ ರೆಡ್ಡಿ ಮತ್ತು ಮುಖ್ಯ ವೈದ್ಯಾಧಿಕಾರಿ ಡಾ. ಎಚ್.ಕೆ. ಮಿಶ್ರಾ ಸ್ಥಳದಲ್ಲೇ ಇದ್ದರು. ದೇಹವು ಊದಿಕೊಂಡಿದ್ದು, ದುರ್ವಾಸನೆ ಬರುತ್ತಿತ್ತು. ಅದನ್ನು ಹೊರ ತೆಗೆಯುವುದು ಕಷ್ಟಕರವಾಗಿತ್ತು. ಹಲವಾರು ಗಂಟೆಗಳ ಪರಿಶ್ರಮದ ನಂತರ, ರಾತ್ರಿ 10 ಗಂಟೆಗೆ, ಅಗ್ನಿಶಾಮಕ ದಳದ ಸಿಬ್ಬಂದಿ ಬಹಳ ಕಷ್ಟಪಟ್ಟು ಕೊಳೆತ ಶವವನ್ನು ಹೊರತೆಗೆದು ಮರಣೋತ್ತರ ಪರೀಕ್ಷೆಗೆ ಕಳುಹಿಸಿದರು, ಆದರೆ ಶವವನ್ನು ಗುರುತಿಸಲಾಗಿಲ್ಲ ಎನ್ನಲಾಗಿದೆ.

ಡಿಯೋರಿಯಾ ಜಿಲ್ಲಾ ಮ್ಯಾಜಿಸ್ಟ್ರೇಟ್ ದಿವ್ಯಾ ಮಿತ್ತಲ್ ಅವರನ್ನು ತನಿಖಾ ಅಧಿಕಾರಿಯಾಗಿ ನೇಮಿಸಲಾಗಿದೆ. ಕಾಲೇಜಿನ ಪ್ರಾಂಶುಪಾಲ ಡಾ. ರಾಜೇಶ್ ಕುಮಾರ್ ಬನ್ಸಾಲ್ ಅವರನ್ನು ತಾತ್ಕಾಲಿಕವಾಗಿ ವಜಾಗೊಳಿಸಲಾಗಿದೆ ಮತ್ತು ಎಟಿಎ ವೈದ್ಯಕೀಯ ಕಾಲೇಜಿನ ಅಂಗರಚನಾಶಾಸ್ತ್ರ ವಿಭಾಗದ ಮುಖ್ಯಸ್ಥೆ ಡಾ. ರಜನಿ ಅವರನ್ನು ಮುಂದಿನ ಆದೇಶದವರೆಗೆ ಮಧ್ಯಂತರ ಪ್ರಾಂಶುಪಾಲರನ್ನಾಗಿ ನೇಮಿಸಲಾಗಿದೆ.

ಯುವಕನನ್ನು ಕೊಲೆ ಮಾಡಿ ಶವವನ್ನು ನೀರಿನ ಟ್ಯಾಂಕ್‌ಗೆ ಎಸೆದು, ಅದರ ಮೇಲೆ ಸ್ಲ್ಯಾಬ್ ಇರಿಸಿರಬಹುದು ಎಂದು ಶಂಕಿಸಲಾಗಿದೆ.

Owned, Printed and published by ANILKUMAR H from Plot No. # 3-5-415/-A MANVI Pooja Rice Mill, Near Kataraki Road, Manvi Tq. Manvi, Dist, Raichur-584123, Printed at MAA FRIENDS PRINTING PRESS, Plot No. # 3-5-415/-A Pooja Rice Mill Near Kataraki Road, Manvi Tq. Manvi, Dist: Raichur-584123, State: Karnataka Editor: ANILKUMAR H